# ಮಾಧ್ಯಮ ಮಂಗಳ

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

ಸಂಪುಟ:22 ಸಂಚಿಕೆ:02


## ಮಂಗಳೂರು ವಿವಿಯಲ್ಲಿ ೭೨ನೇ ವರ್ಷದ ಗಣರಾಜ್ಯೋತ್ಸವ ಮುಖ್ಯ ಅತಿಥಿಗಳಾಗಿ ಬ್ರಿಗೇಡಿಯರ್ ವಿ. ಎನ್. ರೈ

ದೇಶ ಮೊದಲು ಎನ್ನುವ ಮಾತು ಸೈನಿಕರಿಗೆ ಮಾತ್ರವಲ್ಲ ಯುವಪೀಳಿಗೆಯಲ್ಲೂ ಮೂಡಿ ಬರಬೇಕು. ನಮ್ಮ ದೇಶದ ಸೈನಿಕರು ಕೆಚ್ಚೆದೆಯಿಂದ ತಾಯ್ನಾಡಿಗಾಗಿ ಮಡಿಯುತ್ತಾರೆ,ಅವರ ತ್ಯಾಗ ಬಲಿದಾನ ಯುವಜನತೆಗೆ ಸ್ಫೂರ್ತಿದಾಯಕವಾಗಬೇಕು.

ದೇಶವೇ ಮೊದಲು ಎನ್ನುವ ಮನಸ್ಥಿತಿ ಸೈನಿಕರಿಗೆ ಮಾತ್ರ ಸೀಮಿತವಲ್ಲ, ಅದು ಯುವಜನತೆಯಲ್ಲೂ ಮೂಡಿ ಬರಬೇಕು. ತಮ್ಮ ಭೂಮಿಗೆ ವಿಧೇಯಕರಾಗಿರಬೇಕು, ನಿಸರ್ಗವನ್ನು ಪ್ರೀತಿಸಿ ರಕ್ಷಿಸಬೇಕು, ದೇಶದ ಬಗ್ಗೆ ಪ್ರತಿಯೊಬ್ಬನಿಗು ಹೆಮ್ಮೆ ಇರಬೇಕು. ಈ ಅಂಶಗಳನ್ನು ಪಾಲಿಸಿ ದೇಶದ ಏಳಿಗೆಗೆ ಯುವ ಜನರು ದುಡಿಯಬೇಕು.

ಈ ನಿಯಮಗಳು ಜೀವನದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ 72ನೇ ಗಣ-ರಾಜ್ಯೋತ್ಸವ ಸಂದರ್ಭದಲ್ಲಿ ಸಭೀ , ಕರನ್ನು ಉದ್ದೇಶಿಸಿ ನಿವೃತ್ತ ಬ್ರಿಗೇಡಿಯರ್ ಶ್ರೀ ವಿ. ಎನ್. ರೈ ಮಾತನಾಡಿದರು.

ಎನ್ ಸಿಸಿ ತಂಡವು ಗೌರವ ರಕ್ಷೆಯ ಮೂಲಕ ಗಣ್ಯರನ್ನು ಸ್ವಾಗತಿಸಿದರು. ನಿವೃತ್ತ ಬ್ರಿಗೇಡಿಯರ್ ವಿ ಎನ್ ರೈ ಹಾಗೂ ಉಪಕುಲಪತಿ ಡಾ. ಪಿ ಎಸ್ ಯಡಪಡಿತ್ತಾಯ, ಪ್ರಮುಖ ಗಣ್ಯರು ಸಭಾಂಗಣದ ಆವರಣದಲ್ಲಿರುವ ಸೈನಿಕ ಶಾಹೀದ್ ಸ್ಥಳಕ್ಕೆ ತೆರಳಿ ಪುಸ್ಪಾರ್ಚನೆಗೈದ ಬಳಿಕ ಧ್ವಜಾರೋಹಣಗೈದು ಗಣ ರಾಜ್ಯೋತ್ಸವ ಸಂದೇಶ ನೀಡಿದರು.

ಧ್ವಜಾರೋಹನಗೈದು ಬಳಿಕ ಮಾತನಾಡಿದ ರೈ, 1962 ಹಾಗೂ 1971 ರ ಸಂದರ್ಭದಲ್ಲಿ ನಡೆದ ಯುದ್ದದಲ್ಲಿ ಶಸ್ತ್ರಾಸ್ತ್ರಗಳ ಕೊರತೆ ಇದ್ದರೂ ಭಾರತೀಯ ಸೈನಿಕರು ವೀರಾವೇಶದಿಂದ ತಮ್ಮ ಮಾತೃಭೂಮಿಗಾಗಿ ಹೋರಾಡುತ್ತಿದ್ದರು. ಇದೀಗ ಯುದ್ಧಕ್ಕೆ ಬೇಕಾಗುವ ಉನ್ನತ ಮಟ್ಟದ ಉಪಕರಣ ಜೊತೆಗೆ ಯುವ ಸೈನಿಕರಲ್ಲಿ ತ್ಯಾಗದ ಮನೋಭಾವ ಹೆಚ್ಚಾಗುತ್ತಿದೆ ಎಂದರು.



ಮುಖ್ಯ ಅತಿಥಿಗಯಾಗಿದ್ದ ನಿವೃತ್ತ ಬ್ರಿಗೇಡಿಯರ್ ಪಿ.ಎನ್.ರೈ ಅವರನ್ನು ಕುಲಪತಿಗಳು ಸ್ವಾಗತಿಸುತ್ತಿರುವುದು.

ಅಧ್ಯಕ್ಷತೆ ವಹಿಸಿ ಮಾತನಾಡಿದ ವಿವಿಯ ಕುಲಪತಿ ಪ್ರೊ. ಪಿ ಎಸ್ ಯಡಪಡಿತ್ತಾಯ, ಸ್ವತಂತ್ರ ಭಾರತಕ್ಕೆಂದು ಸದೃಢ ಸಂವಿಧಾನ ರಚನೆ ಮಾಡಿದ ಡಾ. ಬಿ. ಆರ್. ಅಂಬೇಡ್ಕರ್ ನೇತೃತ್ವದ ತಂಡದ ಪ್ರಯತ್ನದ ಫಲ ವಿಶ್ವಕ್ಕೆ ಮಾದರಿಯಾಗಿರುವ ಸಂವಿಧಾನ ರೂಪಗೊಂಡಿದೆ. ಸಂವಿಧಾನವು ಅಮೃತ ಸಮಾನ, ಭಾರತೀಯರೆಲ್ಲರ ಪ್ರೇರಣದಾಯಕವಾದ ಧರ್ಮಗ್ರಂಥ. ಮನುಷ್ಯ ಅಹಂಕಾರ, ಸಿಟ್ಟು, ಮತ್ಸರವನ್ನು ತೊರೆದು ಬದಲಾಗಿ ರಾಷ್ಟ್ರ ಪ್ರೇಮ, ಚಾ-ರಿತ್ರ್ಯೆಯ ನಿರ್ಮಾಣ, ಜಾತಿ, ಭೇದವನ್ನು ಮರೆತು ಒಂದೇ ಜಾತಿ ಅದುವೇ ಮಾನವ ಜಾತಿ, ಎನ್ನುವ ಮನಸ್ಥಿತಿ ಎಲ್ಲರಲ್ಲೂ ಬರಬೇಕು ಎಂದರು.

ಈ ಸಂದರ್ಭದಲ್ಲಿ ಮಂಗಳೂರು ಹಂಪನಕಟ್ಟೆ ಕಾಲೇಜಿನ ಎನ್ ಸಿ ಸಿ ಘಟಕದ ಕಮಾಂಡರ್ ಮನೀತ್ ಮತ್ತು ಅಗ್ನಿಶಾಮಕ ದಳದ ಮುಖ್ಯಸ್ಥರಿಗೆ ಸ್ಮರಣಿಕೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿವಿಯ ಉಪ ಕುಲಸಚಿವ ಕೆ ಎ ಎಸ್ ರಾಜು ಮೊಗವೀರ,ಪ್ರಸ್ತಾವನೆ ಗೈದು ಸ್ವಾಗತಿಸಿದರು. ಪರೀಕ್ಷಾಂಗ ಕುಲಸಚಿವ ಪ್ರೊ. ಪಿ ಎಲ್ ಧರ್ಮ, ಕನ್ನಡ ವಿಭಾಗದ ಅಧ್ಯಾಪಕ ಡಾ। ಧನಂಜಯ ಕುಂಬ್ಳೆ ಮತ್ತಿತ್ತರು ಉಪಸ್ಥಿತರಿದ್ದರು.

## ಶಬ್ದ ಗ್ರಹಣದ ತಾಂತ್ರಿಕ ಆಯಾಮಗಳು



ಧ್ವನಿ ಗ್ರಹಣ ತಜ್ಞರಾದ ಪಳನಿ ಡಿ ಸೇನಾಪತಿ ಅವರಿಂದ ಶಬ್ಧ ಗ್ರಹಣದ ಕಾರ್ಯಗಾರ

ಇತ್ತೀಚಿಗೆ ಮಂಗಳೂರು ವಿ.ವಿ. ಯ ಸಮೂಹ ಸಂಹವನ ಮತ್ತು ಪತ್ರಿಕೋದ್ಯಮ ವಿಭಾಗದ ಕಮ್ಯೂನಿಕೇಷನ್ ಕ್ಲಬ್ ವತಿಯಿಂದ ದೃಕ್-ಶ್ರವ್ಯ ಮಾಧ್ಯಮದಲ್ಲಿ ಧ್ವನಿ ಗ್ರಹಣ ತಾಂತ್ರಿಕತೆಗಳ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ನಡೆಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಕನ್ನಡ ಚಿತ್ರರಂಗದ ಖ್ಯಾತ ಧ್ವನಿ ಗ್ರಹಣ ತಜ್ಞ, ರಾಜ್ಯ ಪ್ರಶಸ್ತಿ ವಿಜೇತ ಪಳನಿ ಡಿ. ಸೇನಾಪತಿಯವರು ಶಬ್ದ ತರಂಗಳು ಯಾವ ರೀತಿಯಲ್ಲಿ ಉದ್ಭವಿಸುತ್ತದೆ ಹಾಗೂ ಅದರ ನಿಯಂತ್ರಣ ಹೇಗೆ ಮಾಡಬೇಕು. ಕ್ಷೇತ್ರ ಕಾರ್ಯಗಾರದಲ್ಲಿ ಶಬ್ದ ಅಲೆಗಳು ಹೇಗೆ ಪಸ-ರಿಸುತ್ತವೆ ಎಂಬುದರ ಕುರಿತು ಸಂವಹನ ವಿದ್ಯಾರ್ಥಿ ಗಳಲ್ಲಿ ಪ್ರಾಯೋಗಿಕ ಕಾರ್ಯಗಾರದ ಮೂಲಕ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರುಗಳಾದ ಶಶಿಧರ್, ನಿತಿಶ್. ಪಿ, ಅನುಷ ಎನ್. ಭಟ್ ಅವರು ಉಪಸ್ಥಿತರಿದ್ದರು. ಅಂತಿಮ ಷರ್ಾದ ವಿದ್ಯರ್ಥಿಯಾದ ಕುಮಾರ ಸುಬ್ರಹ್ಮಣ್ಯ ನಿರೂಪಿಸಿ, ರಂಜಿತ್ ಸ್ವಾಗತಿಸಿದರು.

## ವಿ.ವಿ.ಯ ಅಂಗಣದಲ್ಲಿ ಕುಲಪತಿಗಳಿಂದ ಉದ್ಘಾಟನೆಗೊಂಡ ನಾಲ್ಕು ಹೊಸ ಯೋಜನೆಗಳು

ಮಾನವೀಯತೆಯಿಂದ ಒಡಮೂಡಿದ ಮನುಷ್ಯ ಸಹಜ ಧರ್ಮ ಪ್ರತಿಯೊಬ್ಬನಲ್ಲೂ ಇರಬೇಕು. ಅದನ್ನು ಪಾಠ, ಪ್ರವಚನಗಳಿಂದ ಬೆಳೆಸಲು ಸಾಧ್ಯವಿಲ್ಲ. ಸಮಾಜವನ್ನಾಧರಿಸಿ ಬೆಳೆಯುವ ಮನುಷ್ಯ ತನ್ನ ಕೊನೆಯುಸಿರಿಗೂ ಮೊದಲು ಸಮಾಜಕ್ಕೆ ಪ್ರತಿಯಾಗಿ ಏನನ್ನಾದರೂ ಕೊಡುಗೆ ನೀಡಬೇಕು ಎಂದು ಮಂಗಳೂರು ವಿ.ವಿ. ಯ ಮಾನ್ಯ ಕುಲಪತಿಗಳಾದ ಪ್ರೊ.ಪಿ.ಎಸ್.ಯಡಪಡಿತ್ತಾಯ ಅವರು ಅಭಿಪ್ರಾಯ ಪಟ್ಟರು.

ವಿವಿಧ ಜನೋಪಕಾರಿ ಯೋಜನೆಗಳ ಲೋಕಾರ್ಪಣೆಯ ನಂತರ ಸಭಿಕರನ್ನುದ್ದೇಶಿಸಿ ಮಾತಾನ್ನಾಡಿದ ಅವರು ಪ್ರಸ್ತುತ ಸಂದರ್ಭದಲ್ಲಿ ಪ್ರತಿಯೊಬ್ಬರನ್ನು ಆವರಿಸಿರುವ ವಾಣಿಜ್ಯೀಕರಣದ ಜಾಲಗಳಿಂದ ಮನುಷ್ಯತ್ವವನ್ನು ಭೂತಗನ್ನಡಿಯಿಂದ ಹುಡುಕುವಂತಾಗಿದೆ. ಆದರೂ ಮನುಷ್ಯತ್ವದ ಸೆಲೆ ಸಂಪೂರ್ಣ ಬತ್ತಿಲ್ಲ. ಹಲವಾರು ಒಳ್ಳೆಯ ಮನಸ್ಸುಗಳ ಸಮಾಜಮುಖಿ ಚಿಂತನೆ ಮತ್ತು ಆಶಯಗಳ ಮೂರ್ತ ಸ್ವರೂಪವೇ ಪ್ರಸ್ತುತ ಸಂದರ್ಭದಲ್ಲಿ ಉದ್ಘಾಟನೆಗೊಂಡ ವಾತ್ಸಲ್ಯ ನಿಧಿ ಯೋಜನೆ ಎಂದು ತಿಳಿಸಿದರು.

ವಾತ್ಸಲ್ಯ ನಿಧಿ ಉದ್ಘಾಟಿಸಿ ಮಾತಾನಾಡಿದ ಬ್ಯಾಂಕ್ ಆಫ್ ಬರೋಡಾದ ಪ್ರಾದೇಶಿಕ ವ್ಯವಸ್ಥಾಪಕ



ಸುನೀಲ್ ಕೆ.ಪೈ ಅವರು ವಿ.ವಿ ಯು ಸಾರ್ವಜನಿಕ-ರಿಗಾಗಿ ಹಮ್ಮಿಕೊಂಡಿರುವ ಈ ವಾತ್ಸಲ್ಯ ನಿಧಿ ಒಂದು ಅದ್ಬುತ ಯೋಜನೆಯಾಗಿದ್ದು, ಅರ್ಹ ಬಡವರಿಗೆ ಪ್ರಯೋಜನಕಾರಿಯಾಗಲಿದೆ ಇದಕ್ಕೆ ಬ್ಯಾಂಕ್ ಆಫ್ ಬರೋಡಾ ಸಣ್ಣ ಮಟ್ಟದ ಪಾಲುದಾರರಾಗುತ್ತಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ ಎಂದರು.

ಇದರೊಂದಿಗೆ ರಾಜ್ಯ ವಿಶ್ವವಿದ್ಯಾಲಯಗಳಲ್ಲೇ ಮೊದಲ ಬಾರಿಗೆ ಅರ್ಹ ಬಡ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾಗಿರುವ ಮಧ್ಯಾಹ್ನದ ಊಟದ ಯೋಜನೆಯ ಹಾಜರಿ ಪುಸ್ತಕವನ್ನು ಕುಲಪತಿ ಪ್ರೊ.ಯಡಪಡಿತ್ತಾಯ ಅವರು, ಸಮಿತಿಯ ಅಧ್ಯಕ್ಷೆ ಪ್ರೊ.ಬಿ.ಕೆ. ಸರೋಜಿನಿ ಅವರಿಗೆ ಹಸ್ತಾಂತರಿಸುವ ಮೂಲಕ ಪ್ರಸ್ತುತ ಊಟದ ಯೋಜನೆಯನ್ನು ಸಾಂಕೇತಿಕವಾಗಿ ಉದ್ಘಾಟಿಸಿದಲ್ಲದೆ ಈ ಯೋಜನೆಗಾಗಿ ತಮ್ಮ ವೈಯಕ್ತಿಕ ದೇಣಿಗೆಯನ್ನಾಗಿ ಒಂದು ಲಕ್ಷ ರೂಪಾಯಿಗಳ ಚೆಕ್ಕನ್ನು ಸಮಿತಿಯ ಅಧ್ಯಕ್ಷರಿಗೆ ಹಸ್ತಾಂತರಿಸಿದರು.

ಕೊಣಾಜೆ ಗ್ರಾಮ ಪಂಚಾಯತಿ ಪಿಡಿಒ, ಸವಿತಾ ಅವರು, ಬ್ಯಾಂಕ್ ಆಫ್ ಬರೋಡಾದ ಸಿ ಎಸ್ ಅರ್ ನಿಧಿಯ ನೆರವಿನಿಂದ ಸಾರ್ವಜನಿಕ ಬಳಕೆಯ ಸದುದ್ದೇಶದಿಂದ ಕೊಣಾಜೆ ಬಸ್ ನಿಲ್ದಾಣದ ಬಳಿ ನಿರ್ಮಿಸಲಾದ ಸಾರ್ವಜನಿಕ ಶೌಚಾಲಯವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕುಲಪತಿಗಳು ಮಂಗಳ ಗಂಗೋತ್ರಿಯ ಎನ್.ಎಸ್.ಎಸ್ ಘಟಕದ 2021-22ನೇ ಸಾಲಿನ ಕಾರ್ಯ ಚಟುವಟಿಕೆಗಳನ್ನೂ ಉದ್ಘಾಟಿಸಿದರು.

ಕಾರ್ಯಕ್ರಮ ಸಂಚಾಲಕರಾದ ಶ್ರೀ ಪ್ರಶಾಂತ್ ನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಜಂಟಿ ಸಮಾರಂಭದಲಿ ವಿ.ವಿ.ಯ ಕುಲ ಸಚಿವರಾದ ಶ್ರೀ.ಕೆ.ರಾಜು ಮೊಗವೀರ, ಪರೀಕ್ಷಾಂಗ ಕುಲಪತಿ ಪ್ರೊ.ಪಿ.ಎಲ್.ಧರ್ಮ, ಕಾರ್ಯಕಾರಿ ಎಂಜಿನಿಯರ್ ಉಮೇಶ್ ಭಟ್ ವೈ, ಎನ್ ಎಸ್ ಎಸ್. ಸಂಯೋಜಕರಾದ ಡಾ.ಗೋವಿಂದರಾಜ್ ಬಿ.ಎಂ. ಹಾಗೂ ಬ್ಯಾಂಕ್ ಆಫ್ ಬರೋಡಾದ ಹಿರಿಯ ಶಾಖಾ ವ್ಯವಸ್ಥಾಪಕರಾದ ಲಕ್ಷ್ಮೀಕಾಂತ್ ನಾಯಕ್ ಉಪಸ್ಥಿತರಿದ್ದರು.

## ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮ



ದಾರಿತ'ಪ್ಪ'ವ' ವಿದ್ಯಾರ್ಥಿಗ'ಳಲ್ಲಿ ಅರಿವು ಮೂಡಿಸಿ ವಿದ್ಯಾರ್ಥಿಗ'ಳಿಗೆ ಮಾದಕ ವಸ್ತುಗಳ ಬಗ್ಗೆ ಎಚ್ಚ-ರಿಕೆ ನೀಡುವುದರ ಜೊತೆಗೆ ದಾರಿತಪ್ಪಿದ ನಂತರ ದೈವಚಿತ್ತ ಎಂದುಕೂರುವ ಬದಲು ನಮ್ಮಲ್ಲಿ ನಾವು ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಸಮಾಜಕ್ಕೆ ಶಕ್ತಿಯಾಗಿ ನಿಂತು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಜಾತಿ, ಧರ್ಮ ಭೇದ ಬಿಟ್ಟು ಮಾನಸಿಕ ಪರಿವರ್ತನೆ ಬಹಳ ಮುಖ್ಯ ಎಂದು ಮಂಗಳೂರು ವಿಶ್ವವಿದ್ಯಾನಿಲಯ ಕುಲಪತಿಗಳಾದ ಡಾ.ಸುಬ್ರಹ್ಮಣ್ಯ ಯಡಪಡಿತ್ತಾಯ ಅವರು ತಿಳಿಸಿದರು.

ವಿದ್ಯಾರ್ಥಿಕ್ಷೇಮ ಪಾಲನಾ ಮತ್ತು ಸಮಾಜ-ಕಾರ್ಯವಿಭಾಗದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನ್ನಾಡಿದ ಅವರು ಇಂದಿನ ಯುವಜನರಲ್ಲಿ ಮಾದಕ ವಸ್ತುಗಳ ಬಳಕೆಯ ದುಷ್ಟಪರಿಣಾಮಗಳ ಬಗ್ಗೆ ಅರಿವಿರಬೇಕು. ಆ ಮೂಲಕ ಂಿ'ುುವ'ಜನಾಂಗ' ವ'ುಾದ'ಕ'ಜಾಲದ' ಸ'ೆಳ'ವಿನಿಂದ' ಹೊರಬಂದು ಸಮಾಜದ ಧ'ನಾತ್ಮಕಕೃತ್ಯತ್ವದ ಶಕ್ತಿಯಾಗಬೇಕೆಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರ'ವ'ುದ' ಅಧ್ಯಕ್ಷತೆಯನ್ನು ರವಿರಾಜ್ ಎನ್ ಎಸ್ ವಹಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಜೆರಾಲ್ಡ್ ಡಿ'ಸೋಜ ಹಾಗೂ ಪಿ ವಿ ಭಂಡಾರಿ ಅವರು ವಿದ್ಯಾರ್ಥಿಗಳಿಗೆ ಮಾಹಿತಿಕಾರ್ಯಗಾರವನ್ನು ನಡೆಸಿಕೊಟ್ಟರು.

ನಂತರ ಸಮಾಜಕಾರ್ಯ ವಿದ್ಯಾರ್ಥಿಗಳಿಂದ ಡ್ರಗ್ಸ್‌ಜಾಗೃತಿ ಕುರಿತ ಬೀದಿನಾಟಕ ಪ್ರದರ್ಶನ ನಡೆಯಿತು. ವಿಭಾಗದ ವಿದ್ಯಾರ್ಥಿನಿಯರಾದ ಸುಶ್ಮಿತಾ ಮತ್ತು ಸ್ಫೂರ್ತಿ ಕಾರ್ಯಕ್ರಮವನ್ನು ನಿರೂಪಿಸಿದರು.

ಕೊನೆಯಲ್ಲಿ ಕಾರ್ಯಕ್ರಮದ ಯಶಸ್ಸಿಗೆ ಸಹಕ-ರಿಸಿದ ಪ್ರತಿಯೊಬ್ಬರಿಗೂ ಪ್ರಶಾಂತ್ ನಾಯಕ್ ಅವರು ಧನ್ಯವಾದ ಸಮರ್ಪಿಸಿದರು.





-ಪವನ್ ಕುಮಾರ್ ವಿ

## ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ ಭೇಟಿ(ನ್ಯಾಕ್)

ಮಂಗಳೂರು ವಿಶ್ವವಿದ್ಯಾನಿಲಯ ಶಿಕ್ಷಣ ಸಂಸ್ಥೆಗೆ ನ್ಯಾಕ್ ತಂಡವು ಫೆ.7, 8,ಮತ್ತು 9 ಮೂರು ದಿವಸಗಳ ಕಾಲ ಭೇಟಿಕೊಟ್ಟರು.

ಮೂರು ದಿವಸಗಳಲ್ಲಿ ಕಾಲೇಜಿನ 28 ವಿಭಾಗಗಳನ್ನು ಸಂಪೂರ್ಣವಾಗಿ ಗಮನಿಸಿ ವಿಭಾಗಗಳ ಅಧ್ಯಕ್ಷರು, ಉಪನ್ಯಾಸಕರ ನಡುವೆ ಮಾತುಕತೆಯಲ್ಲಿ ಪಾಲ್ಗೊಂಡು ಅಂಕಿ ಅಂಶಗಳನ್ನು ಕಲೆಹಾಕಿದರು. ನ್ಯಾಕ್ ತಂಡದಲ್ಲಿ ಡಾ. ಮಧುಮಿತದಾಸ್ ಅಧ್ಯಕ್ಷರು ನ್ಯಾಕ್, ಸದಸ್ಯರಾದ ಡಾ. ಶೀಭಾ ಉದ್ವಾಟ, ಡಾ. ಮನೋಜ್ ಕುಮಾರ್ ಸಕ್ಸೇನ, ಡಾ ಶಿವಕುಮಾರ್ ಗುಪ್ತ ಡಾ. ಶಾಂತಿ ಸುಂದರಮ್ ಜೊತೆಗೆ ಕಾಲೇಜಿನ ಐಕ್ಯುಎಸಿಯ ನಿರ್ದೇಶಕಿ ಡಾ.ಕಿಶೋರಿ ನಾಯಕ್ ಕೆ, ಆಂಗ್ಲ ವಿಭಾಗದ ಉಪನ್ಯಾಸಕರು ಮತ್ತು ಉಪನಿರ್ದೇಶಕ ವೈದ್ಯಕೀಯ ಭೌತಶಾಸ್ತ್ರ ವಿಭಾಗದ ಉಪನ್ಯಾಸಕರಾದ ಡಾ. ಕರುಣಾಕರ್





ಎನ್ ಹಾಗು ಉಳಿದ ನಾನ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

**ಸಾಂಸ್ಕೃತಿಕ ಕಾರ್ಯಕ್ರಮ:**

ಮೊದಲ ದಿನ ಸಂಜೆ, ಮಂಗಳ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಾನಾ ಸಂಸ್ಕೃತಿಗಳನ್ನು ಬಿಂಬಿಸುವ ಕಲೆಗಳನ್ನು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ನ್ಯಾಕ್ ತಂಡ, ಕುಲಪತಿ ಡಾ. ಸುಬ್ರಹ್ಮಣ್ಯ ಎಡಪಡಿತ್ತಾಯ , ಕುಲಸಚಿವ ಕೆ ಎ ಎಸ್ ರಾಜು ಮೊಗವೀರ, ವಿಭಾಗಗಳ ವಿಭಾಗಗಳ ಬೋಧಕ-ಬೋದಕೇತರರು ಉಪಸ್ಥಿತರಿದ್ದರು.

**ವಿದ್ಯಾರ್ಥಿ, ಪೋಷಕರ ನಡುವೆ ಸಂವಹನ:**

ಡಾ. ಯು ಆರ್ ರಾವ್ ಸಭಾಂಗಣದಲ್ಲಿ ಕೊನೆಯ ದಿನ ವಿವಿಧ ವಿಭಾಗದ ವಿದ್ಯಾರ್ಥಿಗಳು ಮತ್ತು ಆಯ್ದ ಪೋಷಕರೊಂದಿಗೆ ಪರಸ್ಪರ ಸಂವಹನ ಆಯೋಜಿಸಲಾಯಿತು.

ನ್ಯಾಕ್ ಒಂದು ಉನ್ನತ ಸಂಸ್ಥೆಗಳ ಕಾರ್ಯಚಟುವಟಿ-ಕೆಗಳಿಗೆ ಗುಣಮಟ್ಟದ ಭರವಸೆ ಕೊಡುವ ಒಂದು ಸಂಸ್ಥೆ ಇದು ಪ್ರಾರಂಭವಾದುದು 1998ರಲ್ಲಿ ಬೆಂಗಳೂರಿನಲ್ಲಿ. ಇದರಲ್ಲಿ ಆಡಳಿತ ಮಂಡಳಿಗಳ ನೀತಿ ನಿರ್ಮಾಪಕರು, ಹಿರಿಯ ಶಿಕ್ಷಣ ತಜ್ಞರನ್ನು ಒಳಗೊಂಡ ಸಾಮನ್ಯಸಭೆ ಮತ್ತು ಕಾರ್ಯನಿರ್ವಾಹಕ ಸಮಿತಿಯ ಮೂಲಕ ಕೆಲಸ ಮಾಡುತ್ತದೆ.

ಪ್ರತಿಯೊಂದು ಕಾಲೇಜಿನ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು, ಪಠ್ಯಕ್ರಮ,ಮೌಲ್ಯ ಶಿಕ್ಷಣ, ಸಂಸ್ಥೆಗಳ ಸಂವಹನ, ಶ್ರೇಯೋಭಿವೃದ್ಧಿಗೆಮಾನ ದಂಡನುಸಾರವಾಗಿ ಪ್ರತಿ 5 ವರುಷಗಳಿಗೊಮ್ಮೆ ವಿದ್ಯಾಸಂಸ್ಥೆಗಳಿಗೆ ಭೇಟಿ ಕೊಡುತ್ತಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

## ಸಂಪಾದಕೀಯ

# ಜನರಿಗೆ ಯೋಜನೆಗಳ ಸರಿಯಾದ ಮಾಹಿತಿ ಸಿಗುವಂತಾಗಲಿ

ಸ್ವಾತಂತ್ರ್ಯಪಡೆದುಕೊಂಡು 74 ವರುಷಗಳು ಕಳೆಯುತ್ತಿವೆ ಅದನ್ನು ದಾಟಿ ಮುಂದೆ ಮುಂದೆ ಸಾಗುವ ವರುಷಗಳು ಕಾಯುತ್ತಿವೆ. ಈ ನಡುವೆ ಅನೇಕ ಹೊಸ ಹೊಸ ಸರ್ಕಾರಗಳು ಬರುತ್ತವೆ, ಈ ಹಿಂದೆ ಬಂದಿವೆ. ಜೊತೆ ಜೊತೆ ಅನೇಕ



ಯೋಜನೆಗಳನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಬಂದಿವೆ. ಇದು ಒಳ್ಳೆಯ ಬೆಳವಣಿಗೆ. ಹೆಗಲ ಮೇಲೆ ಹಾಕಿಕೊಂಡ ಯೋಜನೆಗಳು ಎಷ್ಟರ ಮಟ್ಟಿಗೆ ತಲುಪಿದೆ? ಎಷ್ಟು ಜನ ಅನುಭವಿಗಳು ಇದ್ದಾರೆ? ಅನ್ನುವುದರ ಕುರಿತಾಗಿ ಸರ್ಕಾರಗಳು ಅಂಕಿ ಅಂಶಗಳನ್ನು ಸರಿಯಾಗಿ ಪರಿಶೀಲಿಸುವ ಅಗತ್ಯತೆ ಇದೆ. ಯೋಜನೆಗಳೇನೋ ಮಾಡಿಬಿಡಬಹುದು ಆದರೆ ಅದನ್ನು ಜಾರಿಗೆ ತರುವ ಮುನ್ನ ಸರಿಯಾದ ಮಾಹಿತಿ ಕೂಡ ಎಲ್ಲಾ ಶಾಸಕರಿಗೆ ತಿಳದಿರಬೇಕು. ಅನೇಕ ಹೊಸ ಹೊಸ ಯೋಜನೆಗಳು ಜನಸಾಮನ್ಯರ ಆಧಾರವಾಗಿಯೆ ಜಾರಿಗೆ ತರಲಾಗುತ್ತದೆ. ಆದರೆ ಅಂತಹ ಯೋಜನೆಗಳು ಅವರಿಗೆ ತಲುಪುತ್ತಿದೆಯಾ ಎಂದು ಖಾತರಿಪಡಿಸುವುದು ಮುಖ್ಯ.

ನಮ್ಮಲ್ಲಿ ಅನೇಕ ವೇಳೆ ಅದ್ಭುತ ಯೋಜನೆಗಳು ಬಂದಿರುತ್ತವೆ. ಅದರ ಸದುಪಯೋಗ ಪಡೆದುಕೊಳ್ಳಲು ಬೇಕಾದ ಮಾಹಿತಿಯು ಜನಸಾಮನ್ಯರಿಗೆ ಅರಿವಾಗದೆ ಅನೇಕ ಸಮಯದಲ್ಲಿ ವಂಚಿತರಾಗುವರು ಹೆಚ್ಚು. ಇದಕ್ಕೆ ಮೂಲ ಕಾರಣ ಮಾಹಿತಿ ಪ್ರಸಾರದ ಕೊರತೆ.

ಉದಾಹರಣೆಗೆ ಪಂಚಾಯಿತಿಗಳಿಂದ ಸಿಗುವ ಅನೇಕ ಯೋಜನೆಗಳು ಯಾರೋ ಬೆರಳೆಣಿಕೆಯಷ್ಟು ಮಂದಿಗೆ ಲಭಿಸುತ್ತಿವೆ.ಇನ್ನುಳಿದ ಜನರಿಗೆ ಇದರ ವಿಷಯ ಅರಿವಾಗುವುದು ಯೋಜನೆಯ ಕೊನೆಯ ದಿನಾಂಕವಾದ ಮೇಲೆ. ಕಾರಣ ನಿರ್ಲಕ್ಷ್ಯವೆ ಹೊರತು ಬೇರೇನು ಅಲ್ಲ. ಇಷ್ಟೂ ಮಾತ್ರವಲ್ಲ, ಹೊಸ ಯೋಜನೆಗಳು ಜಾರಿಯಾದಾಗ ಅದನ್ನು ಪಡೆಯಲು ಬೇಕಾದ ಕಡತ, ಇನ್ನೀತರ ವ್ಯವಹಾತರ ಪತ್ರಗಳ ಅವಶ್ಯಕತೆಗಳ ಮಾಹಿತಿ ಸಿಗುವುದು ಆಯಾ ಆಯಾ ಸಂಬಂಧಪಟ್ಟ ಕಛೇರಿಗಳಿಗೆ ಅಲೆದಾಗ ಮಾತ್ರ. ಹಾಗಾದರೆ ಆಧುನೀಕರಣದ ಉಪಕರಣಗಳೆಂದು ಯಾವುದನ್ನು ಕರೆಯುತ್ತೇವೆಯೋ ಮೊಬೈಲ್ ಆಗಿರಬಹುದು, ಟಿ.ವಿ ಮಾಧ್ಯಮ, ಸುದ್ದಿ ಮಾಧ್ಯಮ ಜನರಿಗೆ ಸಂಕ್ಷಿಪ್ತ ಮಾಹಿತಿ ನೀಡುವಲ್ಲಿ ವಿಫಲವಾಗಿವೆ.

ಜನರಿಗೆ ತುಂಬಾ ತೊಂದರೆಯಾದ ಒಂದು ಯೋಜನೆ ಅಂದರೆ ಆಧಾರ್ ತಿದ್ದುಪಡಿ. ಆಧಾರ್ ಕಾರ್ಡ್ ಜಾರಿಗೆ ತಂದುದರಲ್ಲಿ ಬಹಳ ಒಳ್ಳೆಯ ಅಂಶಗಳಿದ್ದರೂ ಆ ನಂತರದಲ್ಲಿ ಪುನಃ ತಿದ್ದುಪಡಿ ಮಾಡುವ ಸಂದರ್ಭ ಬಂದಾಗ ಅದು ಹೆಸರು, ಮೊಬೈಲ್ ಸಂಖ್ಯೆ ಜೋಡಣೆ ಇನ್ನಿತರ ಸಣ್ಣ ಪುಟ್ಟ ಸೇರ್ಪಡೆ ಜನರಿಗೆ ಕೆಲಸದ ನಡುವೆ ಬಹಳ ಕ್ಲಿಷ್ಟ ಎನಿಸಿತು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಧಾರ್ ತಿದ್ದುಪಡಿ ಮಾಡಿಸಿಕೊಂಡವರಿದ್ದಾರೆ. ತನ್ನ ದಿನನಿತ್ಯದ ಕೆಲಸವನ್ನು ಬಿಟ್ಟು ಅರ್ಧಂಬರ್ಧ ಮಾಹಿತಿಯ ಜೊತೆಗೆ ವಾರಗಟ್ಟಲೆ ಬಳಲಿ ರೋಸಿ ಹೋದವರಿದ್ದಾರೆ. ಅದು ತಿದ್ದುಪಡಿಯ ಅಧಿಕಾರ ಇದ್ದದ್ದು ಕೆಲವು ಬ್ಯಾಂಕ್ ಮತ್ತು ಪೋಸ್ಟ್ ಆಫೀಸ್ಗಳಲ್ಲಿ ಮಾತ್ರ. ಇದರಿಂದ ಅನೇಕ ಜನರು ದಿನಗಟ್ಟಲೆ ಕಾಯುವ ಕೆಲಸಗಳು ಬಂದೊದಗಿವೆ. ಇಂತಹ ಅನೇಕ ಯೋಜನೆಗಳು ಸರಿಯಾದ ರೀತಿಯಲ್ಲಿ ಜಾರಿಯಾಗದೆ ತೊಂದರೆಯಾಗಿದೆ.

ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸುಲಭವಾದ ಮಾರ್ಗಗಳು ನಮ್ಮಲ್ಲಿ ಕಂಡಿತ ಇವೆ. ರೋಡಿನ ಬದಿಯಲ್ಲಿ ಕಂಡ ಕಂಡಲ್ಲಿ ಬ್ಯಾನರ್ ಗಳ ಮೇಳವನ್ನು ನಾವು ಕಾಣುತ್ತೇವೆ. ಅಂತಹ ಬ್ಯಾನರ್ಗಳು ಈ ತೆರನಾದ ಮಾಹಿತಿ ಪ್ರಸಾರಕ್ಕಾಗಿ ಸಹಾಯವಾಗಲಿ, ಮತ್ತು ಆಯಾ ಕಛೇರಿಗಳ ಎದುರುಗಡೆ ಮಾಹಿತಿಗಳನ್ನು ನೀಡುವ ಫಲಕಗಳನ್ನು ಹಾಕಬೇಕು, ಕಛೇರಿಗಳಿಂದ ಧ್ವನಿವರ್ಧಕಗಳ ಮೂಲಕ ಪ್ರತಿ ಊರಿಗೆ ಮಾಹಿತಿಗಳನ್ನು ತಿಳಿಸುವಂತಾಗಬೇಕು. ಈಗಾಗಲೇ ಸೋಷಿಯಲ್ ಮೀಡಿಯಾ ಬಹಳ ವೇಗವಾಗಿ ತಲುಪುವ ಸಾಧನಗಳಲ್ಲಿ ಒಂದು.

ಇದರ ಉಪಯೋಗವನ್ನು ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಎಲ್ಲೂ ಕಛೇರಿಗಳಾಗಲಿ, ಸಂಸ್ಥೆಗಳಾಗಲಿ, ಸರ್ಕಾರಗಳಾಗಲಿ, ಜನಸಾಮನ್ಯರಾಗಲಿ ತೊಂದರೆಗೆ ಕಾರಣವಾಗಲು ಸಾಧ್ಯವಿಲ್ಲ.

# ಸುವರ್ಣ ವರ್ಷ ಸಂಭ್ರಮದಲ್ಲಿ ತುಳು ಚಿತ್ರರಂಗ...

## ಎನ್ನತಂಗಡಿಯಿಂದ ಗಮ್ಜಾಲ್‌ವರೆಗಿನ ಸಿನಿಪಯಣ

–ರಂಜಿತ್ ಪಿ

ಭಾರತದ ಸಿನಿಮಾಗಳು ವಿಶ್ವದಾದ್ಯಂತ ಮನ್ನಣೆ ಗಳಿಸಿದ್ದು, ವರ್ಷದಾತ್ಯಂದಲ್ಲಿ ಅನೇಕ ಭಾಷೆಗಳಲ್ಲಿ ನೂರಾರು ಹೊಸ ಸಿನಿಮಾಗಳು ಬಿಡುಗಡೆಗೊಳ್ಳುತ್ತವೆ. ಕನ್ನಡ, ಹಿಂದಿ, ಮಲಯಾಲಂ, ತೆಲುಗು, ತಮಿಳು ಭಾಷೆಗಳಲ್ಲಿ ಹೆಚ್ಚಿನ ಚಿತ್ರಗಳು ಚಿತ್ರ ಮಂದಿರದಲ್ಲಿ ಪ್ರದರ್ಶಗೊಳ್ಳುತ್ತಿದ್ದು ಈ ಪಟ್ಟಿಗೆ ಹೊಸದಾಗಿ ತುಳು ಚಿತ್ರರಂಗವು ಸೇರ್ಪಡೆಗೊಂಡಿದೆ.

ರಂಗಭೂಮಿಯಿಂದ ಪ್ರಾರಂಭಗೊಂಡ ತುಳು ಚಿತ್ರರಂಗದ ಪಯಣ ಮುಖ್ಯ ವೇದಿಕೆಯಲ್ಲಿ ನೂತನ ಚಿತ್ರಗಳನ್ನು ಬಿಡುಗಡೆಗೊಳಿಸುವ ಮುಖಾಂತರ ತನ್ನ ಪಾಬ್ರಲ್ಯವನ್ನು ಪ್ರದರ್ಶಿಸುತ್ತಿವೆ.

ತುಳು ಚಿತ್ರರಂಗವನ್ನು ಕೋಸ್ಟಲ್‌ವುಡ್ ಎಂಬ ಹೆಸರಿನಲ್ಲಿ ಕರೆಯಲ್ಪಡುತ್ತದೆ. ಈ ವರ್ಷ ತುಳು ಚಿತ್ರರಂಗ ಸುವರ್ಣ ವರ್ಷಾಚರಣೆಯ ಸಂಭ್ರಮದಲ್ಲಿದ್ದು ಫೆಬ್ರವರಿ 19ಕ್ಕೆ ಕೋಸ್ಟಲ್‌ವುಡ್‌ಗೆ ಐವತ್ತು ವರ್ಷಗಳು ಸಂದಿವೆ. ತುಳು ಚಿತ್ರರಂಗ ಅದೆಷ್ಟೋ ಯಶಸ್ಸು, ಕಷ್ಟ ನಷ್ಟಗಳು, ಬದುಕಿನ ಮಹತ್ತರ ತಿರುವುಗಳು, ಜೀವನದ ದಾರಿಯಲ್ಲಿನ ಏಳು- ಬೀಳುಗಳನ್ನು. ಸಾಮಾಜಿಕ ಸಮಸ್ಯೆಗಳು, ತುಳುನಾಡಿನ ವಿಭಿನ್ನ ಹಾಗು ವಿಶಿಷ್ಟ ಸಂಪ್ರಾದಯ, ಸಂಸ್ಕ್ರತಿಯನ್ನು ಪ್ರತಿಬಿಂಬಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದು ಹಾಸ್ಯ ತುಳು ಸಿನಿಮಾದ ಜೀವಾಳ.

### ತುಳು ಸಿನಿಮಾದ ಮೊದಲ ಹೆಜ್ಜೆ:

1971 ಫೆಬ್ರವರಿ 19 ರಂದು ಚಿತ್ರರಂಗವೆಂಬ ಮಾಯಲೋಕಕ್ಕೆ ತುಳು ಚಿತ್ರರಂಗ ಪದಾರ್ಪಣೆ ಮಾಡಿತು. ಕೊಡಗಿನ ಖ್ಯಾತ ಉದ್ಯಮಿ ಎಸ್. ಆರ್. ರಾಜನ್ ಎಂಬವವರು ಆನಂದ ಶೇಖರ್ ಮತ್ತು ಸುಂದರ ಕರ್ಕೇರ ಅವರ ಜೊತೆಗೂಡಿ ಸುಮಾರು ಐವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ತುಳು ಭಾಷೆಯ ಚೊಚ್ಚಲ ಚಿತ್ರ " ಎನ್ನ ತಂಗಡಿ" ಸಿನಿಮಾವನ್ನು ನಿರ್ದೇಶಿಸಿದರು. ಕೆ.ಬಿ ಭಂಡಾರಿ ಕಥೆ ಬರೆದಿದ್ದು, ಪದಗಳ ರೂಪದಲ್ಲಿ ಇದ್ದ ಕಥೆಯನ್ನು ದೃಶ್ಯ ರೂಪ ನೀಡಿದ್ದು ವರದನ್. ಟಿ. ಎ.ಮೋತಿ ಸಂಗೀತ ನೀಡಿದ್ದಾರೆ.

ಈ ಸಿನಿಮಾ ಮೊದಲ ಪ್ರದರ್ಶಗೊಂಡಿದ್ದು ಮಂಗಳೂರು ನಗರದ ಜ್ಯೋತಿ ಚಿತ್ರಮಂದಿರದಲ್ಲಿ. ಆದರೆ ಈ ಸಿನಿಮಾ ಸಿನಿ ಪ್ರಿಯರನ್ನು ಸೆಳೆಯುವಲ್ಲಿ ವೈಫಲ್ಯ ಅನುಭವಿಸಿತ್ತು.

1972 ರಲ್ಲಿ ಮತ್ತೊಂದು ತುಳು ಸಿನಿಮಾ "ಬಿಸತ್ತಿ ಬಾಬು" ಬಿಡುಗಡೆಗೊಂಡಿತ್ತು. ಈ ಚಿತ್ರ ರಾಜ್ಯ ಸರ್ಕಾರ ನೀಡುವ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾಗಿದೆ. 1993ರಲ್ಲಿ ಬಿಡುಗಡೆಗೊಂಡ "ಬಂಗಾರ್ ಪಟ್ಲೇರ್" ಅತೀ ಹೆಚ್ಚು ಮನ್ನಣೆಗೆ ಪಾತ್ರವಾದ ಸಿನಿಮಾ. ಈ ಚಿತ್ರವು ಹಲವು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಇನ್ನೊಂದು ಚಿತ್ರ "ಶುದ್ಧ" 8ನೇ "ಏಷಿಯನ್ ಫಿಲ್ಮ್ ಫೆಸ್ಟಿವಲ್-ಓಷಿಯನ್ ಸಿನೆಫ್ಯಾನ್" ನಲ್ಲಿ "ಅತ್ಯುತ್ತಮ ಭಾರತೀಯ ಚಿತ್ರ" ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

1977 ರವರೆಗೂ ಕೋಸ್ಟಲ್‌ವುಡ್‌ನಲ್ಲಿ ಕಪ್ಪು-ಬಿಳುಪು ಸಿನಿಮಾಗಳೇ ತೆರೆಕಾಣುತ್ತಿದ್ದವು. 1978 ರಲ್ಲಿ "ಕರಿಯಣಿ ಕಟ್ಟಂದಿ ಕಂಡನಿ" ತೆರೆಕಂಡ ಸಿನಿಮಾ ಬಣ್ಣದ ಚಿತ್ರಗಳವಾಗಿದ್ದು ಈ ಸಿನಿಮಾದ ಮುಖಂತಾರ 1978 ರಲ್ಲಿ ತುಳು ಸಿನಿಮಾ ಕಪ್ಪು-ಬಿಳುಪಿನ ಸಿನಿಮಾದಿಂದ ಕಲರ್ ಫುಲ್ ಸಿನಿಮಾಗಳು ತೆರೆ ಕಾಣಲು ಪ್ರಾರಂಭವಾದವು.

"ಮದಿಮೆ" ಎಂಬ 2014 ರಲ್ಲಿ ಬಿಡುಗಡೆಯಾದ ಚಿತ್ರವು ಮರಾಠಿ ಭಾಷೆಯಲ್ಲಿ ರಿಮೇಕ್ ಮಾಡಲಾಯಿತ್ತು. ಅನಂತರ ಇತರ ಭಾಷೆಯಲ್ಲಿ ರಿಮೇಕ್ ಆದ ತುಳುವಿನ ಪ್ರಥಮ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇತ್ತೀಚೆಗೆ 2016 ರಲ್ಲಿ ತೆರೆಕಂಡ "ಶಟರ್‌ದುಲಾಯಿ" ಸಿನಿಮಾವು ಇತರ ಭಾಷೆಯಿಂದ (ಮಲಯಾಳಂನ ಶಟರ್) ತುಳುವಿನಲ್ಲಿ ರಿಮೇಕ್ ಆದ ಚೊಚ್ಚಲ ಚಿತ್ರ. 2016ರವರೆಗೂ ಕೋಸ್ಟಲ್‌ವುಡ್‌ನಲ್ಲಿ ಪುರುಷರೇ ನಿರ್ದೇಶನ ಮಾಡುತ್ತಿದ್ದರು. ಆದರೆ ಅಶ್ವಿನಿ ಕೋಟ್ಯಾನ್ "ನಮ್ಮ ಕುಡ್ಲ" ಚಿತ್ರವನ್ನು ನಿರ್ದೇಶಿಸುವುದರ ಮೂಲಕ ಪ್ರಥಮ ಮಹಿಳಾ ನಿರ್ದೇಶಕರಾಗಿ ಹೊರ ಹೊಮ್ಮತ್ತಾರೆ. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಫೆಬ್ರವರಿ 27, 2016ರಲ್ಲಿ ಕೋಸ್ಟಲ್‌ವುಡ್‌ಗೆ 45 ವರ್ಷ ತುಂಬಿದ ಬಗ್ಗೆ ವಿಶೇಷ ವರದಿಯನ್ನು ಪ್ರಕಟಿಸಿತ್ತು. ಅದರಲ್ಲಿ ತುಳುಚಿತ್ರರಂಗದ ಕೆಲವು ಮಹತ್ವದ ವಿಚಾರಗಳ ಬಗ್ಗೆ ಉಲ್ಲೇಖಿಸುತ್ತಾ, 1971ರಿಂದ 2011 ರ ನಡುವಿನ 45 ವರ್ಷಗಳಲ್ಲಿ ತುಳುವಿನಲ್ಲಿ ಕೇವಲ 45 ಚಿತ್ರಗಳು ಮಾತ್ರವೇ ತೆರೆಕಂಡಿದ್ದವು ಎಂದು ಉಲ್ಲೇಖಿಸಲಾಗಿದೆ. ನಂತರ ವರ್ಷಗಳಲ್ಲಿ ತುಳು ಚಿತ್ರರಂಗ ಸ್ತಬ್ದವಾಗಿತ್ತು. ಮಾಗದೊಮ್ಮೆ ತುಳು ಸಿನಿಮಾ ಸದ್ದು ಮಾಡಲು ಪ್ರಾರಂಬಿಸಿದ್ದು "ಒರಿಯರ್ದೊರಿ ಅಸಲ್" ಸಿನಿಮಾ ಮೂಲಕ , ಈ ಸಿನಿಮಾ ತುಳುಚಿತ್ರರಂಗಕ್ಕೆ ಮಹತ್ತರ ತಿರುವು ನೀಡಿದ ಚಿತ್ರವೆಂದು ಹೇಳಿದ್ದಾರೆ. "ಚಾಲಿಪೋಲಿಲು" ಅತೀ ಹೆಚ್ಚು ಪ್ರದರ್ಶನ ಕಂಡ ಹಾಗೂ ಗಲ್ಲಾಪೆಟ್ಟಿಗೆಯಲ್ಲಿ ಸದ್ದುಮಾಡಿ ದಾಖಲೆ ಬರೆದಿದೆ. ಈ ಚಿತ್ರವು ಮಂಗಳೂರಿನಲ್ಲಿ ಪಿವಿಆರ್ ಸಿನಿಮಾದಲ್ಲಿ 511 ದಿನಗಳನ್ನು ಪೂರ್ಣಗೊಳಿಸಿದೆ. ಅಲ್ಲದೇ ಇದು ಇಸ್ರೇಲ್‌ನಲ್ಲಿ ಬಿಡುಗಡೆಯಾದ ಪ್ರಥಮ ಚಿತ್ರ.

ತುಳುಚಿತ್ರರಂಗದ ಪ್ರೇಕ್ಷಕರು ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಯವರು.

ಅಲ್ಲದೇ ವಿದೇಶಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯ ತುಳುವರು. ಮುಂಬೈ, ಬೆಂಗಳೂರು ಹಾಗೂ ದುಬೈನಲ್ಲೂ ತುಳು ಸಿನಿಮಾಗಳು ತೆರೆಕಾಣುತ್ತಿವೆ. ತುಳುವಿನ ಪ್ರಸಿದ್ಧ ಕಲಾವಿದರುಗಳೆಂದರೆ ದೇವದಾಸ್ ಕಾಪಿಕಾಡ್, ಅರವಿಂದ ಬೋಳಾರ್, ಭೋಜರಾಜ್ ವಾಮಂಜೂರು, ನವೀನ್ ಡಿ ಪಡೀಲ್, ಅರ್ಜುನ್ ಕಾಪಿಕಾಡ್, ಪೃಥ್ವಿ ಅಂಬರ್, ಸೋನಲ್ ಮೊಂತೆರೋ ಇತರರು. ಅಲ್ಲದೇ ಇತರ ಭಾಷೆಗಳ ಸಿನಿಕಲಾವಿದರು ಅತಿಥಿ ಕಲಾವಿದರಾಗಿ ನಟಿಸುತ್ತಾರೆ. ಜೊತೆಗೆ ತುಳು ಸಿನಿಕಲಾವಿದರು ಇತರ ಭಾಷೆಗಳ ಸಿನಿಮಾಗಳಲ್ಲಿ ನಟಿಸಿ ಸೈ ಅನಿಸಿಕೊಂಡಿದ್ದಾರೆ. ಹಲವಾರು ಅತ್ಯುತ್ತಮ ಚಿತ್ರಗಳು ಜನರಿಗೆ ಉತ್ತಮ ಮನರಂಜನೆಯನ್ನು ಒದಗಿಸುತ್ತಾ ಪ್ರಖ್ಯಾತಿಯನ್ನು ಪಡೆಯುತ್ತಿವೆ. ಸುವರ್ಣ ವರ್ಷದ ಸಂಭ್ರಮದಲ್ಲಿರುವ ಕೋಸ್ಟಲ್‌ವುಡ್ ಇನ್ನಷ್ಟು ಅತ್ಯುತ್ತಮ ಚಿತ್ರಗಳನ್ನು ನೀಡಿ ಮನರಂಜನೆಯನ್ನು ಒದಗಿಸಲಿ ಎಂದು ಹಾರೈಸೋಣ.

# ಪ್ರತಿಯೊಂದನ್ನು ಓರೆ ಹಚ್ಚುವ ಅಗತ್ಯವಿದೆ ಟೊಳ್ಳು ವಿಚಾರಗಳ ಹಂಚುವಿಕೆಗಿಂತ ಪ್ರಶ್ನಿಸುವುದು ಮುಖ್ಯ

–ಕುಮಾರ್ ಸುಬ್ರಹ್ಮಣ್ಯ ಎಸ್

ಪ್ರತಿಯೊಂದು ವಿಷಯ ವಸ್ತು ವ್ಯಕ್ತಿ ಅಥವಾ ಪ್ರಕೃತಿ ಏನೇ ಇರಲಿ ಅದಕ್ಕೆ ಹಲವಾರು ಆಯಾಮಗಳು ಇದ್ದೆ ಇದೆ. ನೋಡುವವನು ಯಾವ ದೃಷ್ಟಿಕೋನದಲ್ಲಿ ಯಾವ ಆಯಾಮದಲ್ಲಿ ನೋಡುತ್ತಾನೆ ಎಂಬುವುದು ಮುಖ್ಯವಾಗುತ್ತದೆ. ಈಗಿನ ಯುವ ಸಮೂಹದಲ್ಲಿ ಬಹುಸಂಖ್ಯೆಯು ಒಂದೇ ಆಯಾಮವನ್ನು ಬಳಸಿ ನೋಡುತ್ತಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಇಲ್ಲಾ ವಿಶಾಲ ದೃಷ್ಟಿಕೋನವನ್ನು ನಿಯಂತ್ರಿಸಿ ಒಂದೇ ದೃಷ್ಟಿಕೋನವನ್ನು ಬಳಸುವಂತೆ ಕುದುರೆಯ ಕಣ್ಣಿಗೆ ಕಟ್ಟುವ ಪಟ್ಟಿಯ ರೀತಿಯಲ್ಲಿ ಮಾಡಲಾಗುತ್ತಿದೆಯೇ? ಅದು ಅರಿವೇ ಬಾರದಂತೆ. ಹಿಂದಿನ ಜನಗಣತಿಯ ಪ್ರಕಾರ ಭಾರತದಲ್ಲಿ ಯುವ ಸಮುದಾಯ ಹೆಚ್ಚಿದೆ. ಈ ಯುವ ಸಮುದಾಯ ಅರಿಯದೆ ಎಲ್ಲೋ ನಿಯಂತ್ರಣಕ್ಕೆ ಒಳಪಡುತ್ತಿದೆಯೇ ಎಂದೆನಿಸುತ್ತದೆ. ಇದಕ್ಕೆ ಕಾರಣಗಳೂ ಇದೆ.

ಪ್ರಸಕ್ತ ಸಮಾಜದಲ್ಲಿ ನಡೆಯುವ ಯಾವುದೇ ಘಟನೆ ವಿಷಯಗಳಿಂದ ಯುವ ಸಮುದಾಯ ಅಂತರ ಕಾಯ್ದುಕೊಳ್ಳುತ್ತಿದೆ. ಇದಕ್ಕೆ ಕಾರಣ ವಿಷಯದ ಆಳದ ಅರಿವಿನ ಕೊರತೆ, ಅಧ್ಯಯನದ ಕೊರತೆ, ವಿಷಯದ ಬಗ್ಗೆ ವಿಶಾಲ ಅರಿವಿಲ್ಲದೇ ಇರುವುದು ಶಿಕ್ಷಣ ಜ್ಞಾನವಾಗದೆ ಅಂಕಪಟ್ಟಿಗೆ ಸೀಮಿತವಾಗುತ್ತಿರುವುದು. ಎಲ್ಲೋ ಯಾರೋ ಹಾಕಿದ ಪೋಸ್ಟ್‌ಗಳನ್ನು ಓದಿ ಅರೆಬರೆ ತಿಳಿದು ಅದನ್ನೇ ಶೇರ್ ಮಾಡಿ ಇದೇ ನನ್ನ ಜ್ಞಾನ ಎಂಬಂತೆ ತೋರ್ಪಡಿಸುವುದು. ಇದರಲ್ಲೇ ಕಾಣುವ ಕಾರಣಗಳು ಮಾತ್ರ ಇನ್ನೂ ಹಲವಾರಿದೆ ನನಗೇಕೆ ಎಂಬ ಅಸಡ್ಡೆಯೂ ಸಹ. ಈ ಕಾರಣದಿಂದ ಪ್ರಶ್ನೆ ಮಾಡುವ ದನಿಯೇ ಆರಿ ಹೋಗಿದೆ.

ಒಂದು ವಿಷಯದ ಬಗೆಗೆ ಆಳವಾದ ಅಧ್ಯಯ ಇದ್ದಾಗ ಅಂದರೆ ಅದಕ್ಕೆ ಸಂಬಂಧಿಸಿದ ಇತಿಹಾಸ ಅದೇ ರೀತಿ ಘಟನೆಗಳು, ಮುಂದೆ ಆಗಬಹುದಾದ ಬದಲಾವಣೆಯ ಪರಿಣಾಮ ಇದಕ್ಕೆ ಹತ್ತಿರ ಅಥವಾ ಇದೇ ರೀತಿಯ ನೀತಿಗಳು ಇನ್ನೆಲ್ಲಾದರೂ ಇದ್ದರೆ ಅದರ ಬಗೆಗೆ ಅರಿವು ಇವೆಲ್ಲಾ ಇದ್ದರೆ ಒಂದು ಪ್ರಶ್ನೆ ಎತ್ತುವ ಅಥವಾ ಈ ವಿಷಯ ಸರಿ ತಪ್ಪು ಎನ್ನುವ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯ. ಇಲ್ಲದಿದ್ದಲ್ಲಿ ತನ್ನ ಸ್ನೇಹಿತನೋ ತನ್ನ ನೆಚ್ಚಿನ ಯಾವುದೋ ವ್ಯಕ್ತಿ ಏನೇ ಹೇಳದರೂ ಅದೇ ಸರಿ ಎಂಬ ನಿರ್ಧಾರವನ್ನು ನಾವು ಹೊಂದಿ ಅದಕ್ಕೆ ಜೈ ಅನ್ನುವ ಮನೋಭಾವ ಬೆಳಯುತ್ತದೆ. ಇದೆಲ್ಲದಕ್ಕೆ ಮೊಬೈಲ್ ಎಂಬ ಮಾಂತ್ರಿಕನೂ ಸಹ ಕಾರಣೀಭೂತನಾಗಿದ್ದಾನೆ. ಯುವ ಸಮೂಹದ ಅಮೂಲ್ಯ ಸಮಯ ಅರೆ ಮಾಹಿತಿಯ ಅಂತರ್‌ಜಾಲದಲ್ಲೇ ಕಳೆದು ಹೋಗುತ್ತಿದೆ.

ಇದರಿಂದಾಗಿ ಮೌಲ್ಯಯುತ ಚಿಂತನೆಗಳೂ ಹೊರಳುತ್ತಿಲ್ಲ. ಹೀಗೆಂದ ಮಾತ್ರಕ್ಕೆ ಮೊಬೈಲ್ ಬಿಡು ಎಂದಲ್ಲ, ಅದರಲ್ಲಿ ಬರುವ ವಿಷಯಗಳ ಬಗೆಗೂ ಆಳದ ಚಿಂತನೆ ಹಾಗೇ ಸರಿಯಾದ ವಿಮರ್ಶೆಅಗತ್ಯ. ಎಲ್ಲವೂ ಇದೆ ಇದರಲ್ಲಿ ಎಂಬುವುದು ಮೂರ್ಖತನ.

### ಮೊಬೈಲ್ ಎಂಬ ಕಣ್ಕಪ್ಪು ಪಟ್ಟಿ

ಮೊಬೈಲ್ ವಿಸ್ಕೃತ ಜಗತ್ತು ಇಲ್ಲಿ ಸಂಪರ್ಕವು ವಿಶಾಲವಾಗಿ ಬೆಳೆಯುತ್ತದೆ. ಮಾಹಿತಿ ಬೆರಳಿನ ತುದಿಯಲ್ಲೇ ಸಿಗುತ್ತದೆ. ಆದರೆ ಆಳದ ಮಾಹಿತಿ ಅಥವಾ ಸಂಪೂರ್ಣ ವಿವರದ ಹಾಗೇ ವಿವರಣೆಗಳು ಮತ್ತು ಸತ್ಯಸತ್ಯತೆಯ ಅಳತೆ ಹಾಗೇ ಮೌಲ್ಯಯುತ ಮಾಹಿತಿ ಯಾವುದು ಎಂದು ತಿಳಿಯುವುದು ಇದರ ದೊಡ್ಡ ಸಮಸ್ಯೆ. ಇಲ್ಲಿ ಆಪ್ತ ಎನಿಸುವ ಅಥವಾ ಆಪ್ತರು ಹಂಚಿಕೊಂಡ ವಿಷಯನೇ ಸರಿ ಎಂದು ನಾವು ಅದಕ್ಕೆ ಕಟಿಬದ್ಧರಾಗುವುದು ಎಷ್ಟು ಸರಿ? ಯಾವುದೇ ವಿಷಯವನ್ನು ಒರೆಹಚ್ಚಿ ನೋಡದಿದ್ದಾಗ ಅದು ತನ್ನ ನೈಜತೆಯನ್ನು ತೋರದು. ಮೊಬೈಲ್ ನಲ್ಲಿ ಹರಿದಾಡುವ ಮಾಹಿತಿಗಳು ತುಂಬಾ ತೆಳುವಾದ ಮಾಹಿತಿಗಳಾಗಿದೆ. ಯಾವುದೇ ಗಟ್ಟಿತನದ ಮಂಡನೆಗಳಾಗಲಿ, ಸರಿಯಾದ ಸಾಕ್ಷ್ಯಗಳಾಗಲಿ ಇರುವುದಿಲ್ಲ. ಯಾರೋ ಹೇಳಿದ್ದನ್ನು ಇಲ್ಲಿ ಪೋಸ್ಟ್ ಮಾಡಿ ಲೈಕುಗಳು ಬಂದರೆ ಅದೇ ಮುಖ್ಯವಾಗುತ್ತದೆ. ಸೆನ್ಸೇಶನ್ ಎಂಬಂತ ತಲೆಬರಹ ಕೊಟ್ಟು ಒಳಗೆ ಟೊಳ್ಳು ಮಾಹಿತಿ ಇಳಿಸಿ ಓದುಗನ ದಾರಿತಪ್ಪಿಸುವ ಕಾರ್ಯ ಈ ಚುರುಕು ಜಗತ್ತಿನ ಚುಟುಕು ತಂತ್ರಜ್ಞಾನ ಮಾಡುತ್ತಿದೆ. ಈ ರೀತಿಯ ಮಾಹಿತಿಗಳು ಒಂದು ಬದಿಯ ಮಾಹಿತಿಯಾಗಿರುತ್ತದೆ.

ಹಾಗೇ ಅಂತರ್ಜಾಲದಲ್ಲಿ ನಮ್ಮ ಸ್ನೇಹಿತರು ಯಾವುದನ್ನು ಸರಿ ಎನ್ನುತ್ತಾರೋ ಅದೇ ನನಗೂ

## ಉಪ್ಪುಂಚ



ಸರಿಯೇ ಹೊರತು ಒರೆ ಹಚ್ಚುವ ತಾಳ್ಮೆ ಪ್ರಯತ್ನ ಎರಡೂ ನಡೆಯುವುದಿಲ್ಲ.

ಈ ರೀತಿಯ ತೆಳು ಮಾಹಿತಿಗಳು ನಮ್ಮ ಅಧ್ಯಯನದ ಕೊರತೆಯಾಗಿದೆ. ಇಲ್ಲಿ ಬರುವ ಮಾಹಿತಿಯೇ ನಮ್ಮ ಕಣ್ಣಪಟ್ಟಿಯಾಗಿ ತೆಳು ಸುದ್ದಿಯೇ ನಿಜವೆಂದು ನಾವು ಅದನ್ನೇ ನಂಬುತ್ತೇವೆ. ಯಾರದೋ ಚಿಂತನಾ ಲಹರಿಗೆ ನಾವು ಲೈಕ್ ಒತ್ತಿ ಅದೇ ನನ್ನ ಚಿಂತನಾ ಲಹರಿ ಎಂಬಂತೆ ಶೇರ್ ಮಾಡುತ್ತೇವೆ. ಆ ವ್ಯಕ್ತಿಯ ವೈಯಕ್ತಿಕ ನಿಲುವು ನಮ್ಮ ನಿಲುವಾದಾಗ ಅಲ್ಲಿ ನಮ್ಮ ಸ್ವಂತಿಕೆಯ ಹರಣ ನಾವೇ ಮಾಡಿಕೊಳ್ಳುತ್ತೇವೆ.

ಇಲ್ಲಿ ನಮ್ಮ ಲಹರಿ ಅಲ್ಲದೇ ನಾವು ಇತರ ಲಹರಿಯನ್ನೇ ಶೇರ್ ಮಾಡುವಾಗಲೂ ಅವರ ವಿಚಾರವನ್ನು ಒಮ್ಮೆ ಒಳಹೊಕ್ಕು ಸತ್ಯಾಸತ್ಯತೆಯ ಅಳತೆಯನ್ನು ಏಕೆ ನೋಡುವುದಿಲ್ಲ. ಹಿಂದೊಮ್ಮೆ ಹೇಳಿದ ವಿಷಯ ಸರಿ ಇತ್ತು ಎಂಬ ಮಾತ್ರಕ್ಕೆ ಇಂದು ಅದು ಸರಿ ಇರಬಹುದು ಎಂದು ಒಪ್ಪಿಕೊಳ್ಳುವುದು ಎಷ್ಟು ಸರಿ? ಪ್ರತಿಯೊಂದನ್ನೂ ವಿಮರ್ಶೆಗೆ ಒಳಪಡಿಸಿದಾಗ ಮಾತ್ರ ಸ್ಪಷ್ಟ ಚಿತ್ರಣ ಸಾಧ್ಯ.

ಈ ಎಲ್ಲಾ ವಿಷಯಗಳಿಂದಾಗಿ ಸ್ಪಷ್ಟ ಮಾಹಿತಿಯ ಕೊರತೆಯಿಂದಾಗಿ ಯುವ ಪೀಳಿಗೆಯಲ್ಲಿ ಪ್ರಶ್ನಾರ್ಥಕ ಭಾವನೆ ಎಲ್ಲಿಯೋ ಹುದುಗಿ ಹೋಗಿದೆ. ಸಾಮಾಜಿಕ ಜಾಲತಾಣದ ಪರವಿರೋಧದಲ್ಲಿ ಲೈಕು ಶೇರು ಬಿಟ್ಟರೆ ಸರಿಯಾದ ನಿಲುವುಗಳು ಇರುವುದಿಲ್ಲ ಎಂಬುವುದು ಸ್ಪಷ್ಟ.

### ಅಂಕದ ಪೆಡಂಭೂತ

ಜಗತ್ತು ಎಷ್ಟು ಮುಂದುವರೆಯುತ್ತಿದೆ ಎಂದರೆ ಹಳೆಯ ಗಾದೆ ಕೂಸು ಹುಟ್ಟುವ ಮೊದಲು ಕುಲವಿ ಹೊಲಿಸಿದರಂತೆ ಆದರೆ ಈಗ ಕುಸೂ ಹುಟ್ಟುವ ಮೊದಲೇ ಶಾಲೆಯ ಅಪ್ಲಿಕೇಶನ್ ಫಾರಂ ಕೊಂಡು ತಂದರಂತೆ ಎಂದು ಬದಲಾಯಿಸಿಕೊಳ್ಳುವ ರೀತಿಯಾಗಿದೆ. ಮಕ್ಕಳ ಜೀವನದ ಬಗ್ಗೆ ಪ್ಲಾನಿಂಗ್ ಅಗತ್ಯ . ಆದರೆ ಎಷ್ಟರ ಮಟ್ಟಿಗೆ ಎಂಬುದು ಸಹ ಪ್ರಶ್ನೆಯೆ? ಮಗು ತೊದಲಲು ಶುರುವಾದಗಲೇ ಪ್ರೀಕೇಜಿ ಮತ್ತೆ ಎಲ್.ಕೆಜಿ, ಯು.ಕೆಜಿ, ಎಂದು 3ನೇ ವರ್ಷಕ್ಕೆ ಶಾಲೆ ಆರಂಭಿಸಿ ಬಿಡುತ್ತಾರೆ ಅದು ತಪ್ಪು ಎನ್ನುತ್ತಿಲ್ಲ ಆದರೆ ಅಲ್ಲಿಂದಲೇ ಆರಂಭವಾಗುವ ಅಂಕದ ವ್ಯಾಮೋ ಪರೀಕ್ಷೆ ಎಂದಾಗ ತಂದೆ ತಾಯಿಯರ ಎದೆ ಬಡಿತದ ಏರಿಕೆಯಾಗುತ್ತದೆ.

ಈ ಅಂಕ ಸ್ಪರ್ಧೆಯಲ್ಲಿ ಶಿಕ್ಷಕರೂ ಪಾತ್ರಾದಾರಿಗಳಾಗಿ ಪ್ರಶ್ನೆಗೆ ಉತ್ತರ ಮಾತ್ರ ಹೇಳುತ್ತದೆ. ನಿಯಂತ್ರಿತ ಪಠ್ಯಕ್ಕೆ ಮತ್ತೇ ನೋಟ್ಸ್ ಎಂದು ಅದನ್ನು ಮತ್ತು ಸಂಸ್ಕರಿಸಿ ಅಂಕಕ್ಕೆ ಎಷ್ಟು ಬೇಕು ಅಷ್ಟೇ ಬರೆಸಿ ಅದರ ಸಂಪೂರ್ಣ ಜ್ಞಾನ ಅಥವಾ ಸುತ್ತಮುತ್ತಲಿನ ವಿಷಯ ಬೇಡ ಎಂಬಂತೆ ಅಕ್ಕ ಪಕ್ಕದ ಶಾಲೆಗಳಿಗೆ ಸ್ಪರ್ಧಾತ್ಮಕವಾಗಿ ನಡೆದುಕೊಳ್ಳುತ್ತದೆ. ರಾತ್ರಿ-ಹಗಲು ಪಾಠ, ಟ್ಯೂಷನ್, ರಿಡೀಂಗ್ ಟೈಂ ಹಾಗೆಲ್ಲಾ ಕರೆದು ಎಳೆಯ ಮಕ್ಕಳಲ್ಲೆ ನಿಯಂತ್ರಿತ ಚಿಂತನೆಗೆ ದೂಡುವ ಜೈಲಿನಂತಹ ಶಾಲೆಗಳು ಅವೆಷ್ಟೋ ಇವೆ.

ಶಾಲೆ-ಶಾಲೆ ಹೆಸರುಗಳಲ್ಲಿ ನಡೆಯುವ ಹಣಮಾಡುವ ಸ್ಪರ್ಧೆಯಲ್ಲಿ ಏನೂ ಅರಿಯದೇ ಓಡುತ್ತಿರುವ ಮಕ್ಕಳ ಪಾಡು ನಿಜಕ್ಕೂ ಬೇಸರದಾಯಕ ಇದಕ್ಕೆ ತಂದೆತಾಯಿಯರು ಸಹ ಅಕ್ಕಪಕ್ಕದ ಮನೆ ನೆಂಟರು ಇಷ್ಟದ ಮಕ್ಕಳೊಡನೆ ತಮ್ಮ ಮಕ್ಕಳನ್ನು ರೇಸ್‌ಗೆ ಇಟ್ಟು ಇಷ್ಟೇ ಅಂಕ ಬೇಕು ಎಂದು ಪ್ರತಿಪಾದಿಸುತ್ತಾರೆ. ಇಲ್ಲಿ ಕಲಿಕೆ ಅಂಕಕ್ಕಾಗಿ ಬರೀ ಓದಿ-ಓದಿ ಬಾಯಿಪಾಠ ಮಾಡಿ ಬರೆದು ಅಂಕಗಳಿಸುತ್ತಾರೆ.

ಮುಂದೆ ಮುಂದೆ ಆ ಬಾಯಿಪಾಠವೇ ಹೊರತು ಏನು ಅರಿವು ಇರುವುದಿಲ್ಲ. ಇದು ಸಹ ಇನ್ನೊಂದು ರೀತಿಯ ಜ್ಞಾನ ಅಥವಾ ಅರಿವಿನಲ್ಲಿನ ಕೊರತೆಗೆ ಕಾರಣವಾಗುತ್ತದೆ. ಹೀಗೇ, ಜ್ಞಾನದ ಪರಿವರ್ತನೆಯಲ್ಲಾಗುತ್ತಿರುವ ಕುಂಠಿತ ಮುಂದಿನ ಸಮಾಜದ ಬೃಹತ್ ಬದಲಾವಣೆಯಾಗಿ ಅದರಲ್ಲಿ ನಾನು ಎಂಬ ಭಾವನೆಯು ಸಹ ಅಷ್ಟೇ ನನಗೆ ಸಂಬಂಧವಿಲ್ಲ ಎನಿಸಿಬಿಟ್ಟಿದೆ.

ಮತದಾನದ ಹಕ್ಕು 18ರ ನಂತರ ಇದೆ ಎಂದರೆ ಆ ವಯಸ್ಸಿನ ನಂತರ ವ್ಯಕ್ತಿ ವೈಚಾರಿಕತೆ ಬೆಳವಣಿಗೆಯಾಗಿದೆ. ಆತ ಸಮಾಜದ ಒಳಿತು ಕೆಡುಕಿನ ಚಿಂತನೆ ಬೆಳೆದಿರುತ್ತದೆ ಎಂಬ ಕಾರಣಕ್ಕೆ, ಆದರೆ ಈಗ ಸರಕಾರದ ಮುಖ್ಯಮಂತ್ರಿ ಯಾರು ಎಂದರೆ ಒಮ್ಮೆ ಕಕ್ಕಾಬಿಕ್ಕಿಯಾಗುವ ಯುವಸಮುದಾಯವೇ ಹೆಚ್ಚು. ಇನ್ನು ಸರಕಾರ ಜಾರಿಗೆ ತರುವ ಕಾಯಿದೆ ಕಾನೂನುಗಳ ವಿಮರ್ಶೆಯೋ ಅಥವಾ ಅದರ ಬಗೆಗೆ ವಿಮರ್ಶೆ ಸಾಧ್ಯವೇ ಇಲ್ಲ ಎಂಬಂತಾಗಿದೆ. ಈ ಬಗ್ಗೆ ಪ್ರಶ್ನಿಸಿದಾಗ ಉದಾಸೀನದ ಉತ್ತರಗಳು ಬಿಟ್ಟರೆ ಸ್ಪಷ್ಟ ನಿಲುವುಗಳು ಖಂಡಿತಾ ಇರುವುದಿಲ್ಲ. ಇಲ್ಲಿ ಯಾವುದರ ಲೋಪ ಎಂದು ಗುರುತಿಸುವುದು. ಶಿಕ್ಷಣ ಪದ್ದತಿಯನ್ನೇ ದೂಷಿಸುವುದೇ ಅಥವಾ ಯುವ ಸಮುದಾಯವನ್ನ ಎಂಬ ಪ್ರಶ್ನೆ ಏಳುವುದು ಸರ್ವೇಸಾಮಾನ್ಯ. ಆದರೆ ಎಲ್ಲಾ ಯುವಕರು ಹೀಗೇ ಇದ್ದಾರೆ ಎಂದಲ್ಲ. ನೂರರಲ್ಲಿ ಒಂದು ಶೇಕಡಾ ಪ್ರಶ್ನೆಮಾಡುವವರು ಇರಬಹುದು ಅಥವಾ ಇದ್ದಾರೆ ಎಂದುಕೊಳ್ಳೋಣ, ಆದರೆ ಇದು 80 ಶೇಕಡಾಕ್ಕೂ ಹೆಚ್ಚು ಇದ್ದಾಗ ಮಾತ್ರ ಸಮಾಜ ತಿಳಿಯಾಗಲು ಸಾಧ್ಯ.

ವಿದ್ಯೆ ಬಹುತೇಕರು ಪಡೆಯುತ್ತಿದ್ದಾರೆ. ಶಿಕ್ಷಿತ ಸಮಾಜ ರೂಪುಗೊಳ್ಳುತ್ತಿದೆ. ಆದರೆ ಜ್ಞಾನ ಅರಿವಾಗಿ ಪರಿವರ್ತನೆ ಆಗುತ್ತಿದೆಯೇ ಅಥವಾ ಅಂಕ ಶಿಕ್ಷಣದಲ್ಲೇ ಅಂಕಕ್ಕೆ ಜ್ಞಾನ ಸೀಮಿತವಾಗುತ್ತಿದೆಯೇ ಎಂಬುವುದು ಅಗತ್ಯವಾದ ಪ್ರಶ್ನೆ. ಇತಿಹಾಸ ವಿಜ್ಞಾನ, ಸಮಾಜ ಅರಿವಾದಾಗ ಮಾತ್ರ ಸಮಾಜದ ಪ್ರತಿಯೊಂದನ್ನು ಪ್ರಶ್ನಿಸುವ ಅಥವಾ ಪ್ರಶ್ನಿಸುವ ಆಯಾಮದಲ್ಲಿ ನೋಡಲು ಸಾಧ್ಯ. ಅದು ಕೇವಲ ಅಂಕವಾದರೆ ನಡೆಯುವ ಘಟನೆಗೂ ನನಗೂ ಸಂಬಂಧವಿಲ್ಲ ಸಮಾಜ ಜೀವಿ ನಾನಲ್ಲ ಎಂಬ ಭಾವನೆ ಬೆಳೆಯುತ್ತದೆ.

ಇದರಿಂದ ಸಮಾಜದ ಪ್ರತಿಯೊದು ಸಮಸ್ಯೆಯಿಂದ ನುಳುಚಿಕೊಳ್ಳುವ ಪ್ರಯತ್ನ ಆಗುತ್ತದೆಯೇ ವಿನಃ ಪರಿಹಾರಕ್ಕೆ ಏನು ಮಾಡಬೇಕೆಂದು ಚಿಂತಿಸುವ ಮನಸ್ಸು ಕಾರ್ಯಗತಗೊಳ್ಳುವುದಿಲ್ಲ. ಪ್ರಶ್ನೆಗಳೂ ಒಳ್ಳೆಯದೇ ಸಮಾಜದ ಸ್ವಚ್ಚತೆಗೆ ಅರಿವಿನ ಚಿಗುರಿಗೆ ಪ್ರಶ್ನೆ ಅಷ್ಟೇ.

ಅದಕ್ಕೆ ತಿಳುವಳಿಕೆ ಅಗತ್ಯ. ತಿ ಳುವಳಿಕೆ ಎಚ್ಚರವಾದರೆ ಪ್ರಶ್ನೆಗಳು ತಾನೇತಾನಾಗಿ ಉದ್ಭವಿಸುತ್ತದೆ.

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

## ಟ್ವಿಟರ್‌ಗೆ ಖೋ ನೀಡಲಿರುವ ಕೂ ಆ್ಯಪ್

ಮಮತ ಬಿ.

ದೇಶದಲ್ಲಿ ಟ್ವಿಟರ್‌ಗೆ ಪತ್ರಿಸ್ಪರ್ಧಿ ಎಂದೇ ಬಿಂಬಿಸಲಾಗಿರುವ ಕೂ ಆ್ಯಪ್, ಗೂಗಲ್ ಪ್ಲೇ ಸ್ಟೋರ್ ನ ದಿನನಿತ್ಯದ ಅಗತ್ಯಗಳು ಎಂಬ ವಿಭಾಗದಡಿಯಲ್ಲಿ 2020 ರ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಈ ಬಾರಿ ತನ್ನಾದಾಗಿಸಿಕೊಂಡಿದೆ.

ಭಾರತದ್ದೇ ಆಗಿರುವ ಭಾರತೀಯ ಭಾಷೆಗಳಲ್ಲಿ ಲಭ್ಯವಾಗುವ ಮೈಕ್ರೋಬ್ಲ್ಯಾಗಿಂಗ್ ನೆಟ್ಟಿಗರ ಬಹುದಿನದ ಬೇಡಿಕೆಯಾಗಿದೆ. ಇದನ್ನು ಅನುಸರಿಸಿ 2020 ರ ಮಾರ್ಚ್‌ನಲ್ಲಿ ಬೆಂಗಳೂರಿನವರೇ ಆದ ಅಪ್ರಮೇಯ ರಾಧಾಕೃಷ್ಣ ಹಾಗೂ ಮಾಯಾಂಕ್ ಬಿದ್ವಾಟ್ಕ ಎಂಬುವವರಿಂದ ಸ್ಥಾಪಿಸಲ್ಪಟ್ಟ ಈ ಕೂ ಆ್ಯಪ್ ಇದೀಗ ಹಿಂದಿ, ಕನ್ನಡ, ತಮಿಳು, ಬಂಗಾಳಿ, ಗುಜರಾತಿ ಮತ್ತು ಮರಾಠಿಭಾಷೆಗಳಲ್ಲಿ ಲಭ್ಯವಿದ್ದು, ಶ್ರೀಘ್ರದಲೇ ಇಂಗ್ಲೀಷ್ ಭಾಷೆಯಲ್ಲಿ ಆರಂಭವಾಗಲಿದೆ.

ಜತೆಗೆ ಇದರ ಕಾರ್ಯಚಟುವಟಿಕೆಗಳು ಸ್ಥಳೀಯ ನೆಲದಲ್ಲೇ ಮುಂದುವರೆದಿರುವುದರಿಂದ ಬಳಕೆದಾರರ ಖಾಸಗಿತನ ಮತ್ತು ಮಾಹಿತಿ ಭದ್ರತೆಗೆ ಸಮಸ್ಯೆಯಿಲ್ಲ.

**ಟ್ವಿಟರ್‌ಗೆ ಪರ್ಯಾಯವಾಗಿ ಕೂ ಆ್ಯಪ್:**

ಟ್ವಿಟರ್‌ಗೆ ಸರಿಸಮನಾಗಿ ಸ್ಪರ್ಧಿಸುತ್ತಿರುವ ಕೂ ಆ್ಯಪ್ ಟ್ವಿಟರ್ ಮಾದರಿಯಲ್ಲಿಯೇ ಪೋಸ್ಟ್, ವೀಡಿಯೋ, ಫೋಟೊಗಳನ್ನು ಹಂಚಿಕೊಳ್ಳಬಹುದಾಗಿದೆ. ಟ್ವಿಟರ್ ನಲ್ಲಿ ಕೇವಲ 2 ನಿಮಿಷಗಳ ವೀಡಿಯೋ ಅಪ್ಲೋಡ್ ಮಾಡಬಹುದಾದರೇ, ಕೂ ಆ್ಯಪ್ ಮುಲಕ 10 ನಿಮಿಷದವರೆಗೆ ವೀಡಿಯೋ ಅಪ್‌ಲೋಡ್ ಮಾಡಬಹುದಾಗಿದೆ. ಹಾಗೆಯೇ ಟ್ವಿಟರ್ ನಲ್ಲಿ 280 ಶಬ್ದಗಳ ಬಳಕೆಯ ಮಿತಿ ಕೂ ನಲ್ಲಿ 400 ಶಬ್ದಗಳಿಗೆ ವಿಸ್ತರಿಸಿದೆ.

ಈಗಾಗಲೇ ಸುಮಾರು 30 ಲಕ್ಷ ಬಳಕೆದಾರರನ್ನು ಹೊಂದಿರುವ ಕೂ ಆ್ಯಪ್‌ದೇಶದ ವಿವಿಧ ಪ್ರಾಂತೀಯ ಭಾಷೆಗಳಲ್ಲಿ ಸಂವಹನ ನಡೆಸಲು ಅನುಕೂಲ ಮಾಡಿಕೊಡುವ ಮೂಲಕ ದಿನದಿಂದ ದಿನಕ್ಕೆ ತನ್ನ ಬಳಕೆದಾರರ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಿದೆ.

## ಮಾಯಕದ ಮಾವು

-ಅಭಿಲಾಷ ಎಸ್



ಒಂದು ರಾಜ್ಯದಲ್ಲಿ ಭರ್ತೃಹರಿ ಎಂಬ ಸುಗುಣ ರಾಜ ಇದ್ದ. ಒಂದು ದಿನ ಅವನ ಆಸ್ಥಾನಕ್ಕೆ ಒಬ್ಬ ಸಿದ್ದ ಪುರುಷ ಬಂದ. ಕಾಣಿಕೆಯಾಗಿ ಅವನೊಂದು ಮಾವಿನಹಣ್ಣು ತಂದಿದ್ದ. ರಾಜನ ಮುಂದಿಟ್ಟು "ರಾಜಾ,ನೀನು ಸದ್ಗುಣ, ನಿನ್ನಂಥ ರಾಜನಿಂದ ಪ್ರಜೆಗಳು ಸುಖವಾಗಿದ್ದಾರೆ. ಇದು ಅನಂತಕಾಲದವರೆಗೆ ಮುಂದುವರೆಸಬೇಕು ಎಂದು ನನ್ನ ಆಶಯ. ಈ ಮಾವಿನಹಣ್ಣು ಮಾಯಕದ ಹಣ್ಣು ಇದನ್ನು ತಿಂದವ ಚಿರಂಜೀವಿಯಾಗುತ್ತಾನೆ ನೀನು ಇದನ್ನು ಸ್ವೀಕರಿಸಬೇಕು" ಎಂದು ಹೇಳಿ ಹಣ್ಣನ್ನು ರಾಜನಿಗೆ ನೀಡಿ ಹೊರಟುಹೋದ.

'ರಾಜನಿಗೆ ಹೆಂಡತಿ,ಎಂದರೆ ಪಂಚಪ್ರಾಣ. ಅವನು ಬದುಕಿದ್ದದ್ದೇ ಅವಳಿಗಾಗಿ ಎನುವಷ್ಟು ಮೋಹ! ಅವಳಿಲ್ಲದ ಜೀವನಕ್ಕೆ ಯಾವ ಬೆಲೆಯು ಇರದು ಆದುದರಿಂದ ಈ ಹಣ್ಣನ್ನು ಅವಳಿಗೆ ನೀಡುವುದು ಸರಿ' ಎಂದು ಯೋಚಿಸಿ. ಹಣ್ಣನ್ನು ಹೆಂಡತಿಗೆ ಕೊಟ್ಟ. ಇಷ್ಟು ಪ್ರೀತಿಸುವ ಪತಿಯನ್ನು ಹೊಂದಿದ್ದರೂ ಅವಳ ಮನಸ್ಸು ಮಾತ್ರ ಇನ್ನೊಬ್ಬನಲ್ಲಿ ಇತ್ತು. ಅವಳ ಪ್ರಿಯಕರ ಅರಮನೆಯ ಕುದುರೆಗಳನ್ನು ನೋಡಿಕೊಳ್ಳುವವನಾಗಿದ್ದ. ರಾಣಿಗೆ ಅವನ ಮೇಲೆ ಎಂಥಾ ಮೋಹ ಅಂದರೆ ಅವನಿಲ್ಲದ ಬದುಕು ಬೇಡ ಅನ್ನುವಷ್ಟಿತ್ತು. ರಾಜ ಬಲು ಪ್ರೀತಿಯಿಂದ ಕೊಟ್ಟ ಮಾವಿನಹಣ್ಣನ್ನು ತನ್ನ ಪ್ರಿಯಕರ ಕುದುರೆಲಾಯದ ಪಾಲಕನಿಗೆ ಕೊಟ್ಟುಬಿಟ್ಟು ರಾಣಿಳು ಅದನ್ನು ವಿವರಿಸಿದಳು. "ತಿಂದವ ಅಮರನಾಗುತ್ತಾನೆ ಯಾರಿಗೂ ಕೊಡಬೇಡ. ನೀನೆ ತಿಂದುಬಿಡು ನಿನಿಲ್ಲದೆ ನಾನು ಬದುಕಲಾರೆ " ಎಂದಳು.

ರಾಣಾ ಳ ಮೇಲೆ ಪಾಲಕನಿಗೆ ಪ್ರೀತಿ ಇರಲಿಲ್ಲ! ಪ್ರೀತಿ ಇರೋ ಹಾಗೆ ನಟನೆ ಮಾಡುತ್ತಿದ್ದ. ಅವನಿಗೆ ತನ್ನ ಹೆಂಡತಿ ಅಂದರೆ ಭಾರೀ ಪ್ರೀತಿ. ರಾಣ ಳ ಕಾಟದಿಂದ ಅವಳಿಗೆ ಮೋಸ ಮಾಡುತ್ತಿದ್ದೇನೆ ಎಂದು ದುಃಖಿಸುತ್ತಿದ್ದ. ಈಗ ಅದಕ್ಕೆ ಪರಿಹಾರ ಈ ಮಾವಿನಹಣ್ಣು ಇದನ್ನು ತಿಂದು ಅವಳು ಚಿರಂಜೀವಿ ಅಗಲಿ ಅಂತ ನಿರ್ಧರಿಸಿದ, ಹಣ್ಣನ್ನು ತಂದು ಹೆಂಡತಿಗೆ ನೀಡಿದ "ಗಂಡ ಪ್ರೀತಿಯಿಂದ ಹಣ್ಣನ್ನು ಕೊಟ್ಟಿದ್ದಾನೆ. ಆದರೆ ನನ್ನಂಥ ಸಾಮಾನ್ಯ ಹೆಂಗಸು ಅನಂತ ಕಾಲ ಬದುಕಿ ಮಾಡುವುದು ಏನಿದೆ? ತಮ್ಮ ರಾಜ ಪ್ರಜೆಗಳನ್ನು ಮಕ್ಕಳಂತೆ ಪಾಲಿಸುವವ ಆತ ಚಿರಂಜೀವಿಯಾದರೆ ಸಾಕು ಎಂದು ಯೋಚಿಸಿದಳು. ಮಾರನೆಯ ದಿನ ಅರಮನೆಗೆ ಹೋಗಿ ಹಣ್ಣನ್ನು ರಾಜನ ಮುಂದೆ ಇಟ್ಟು ಅದರ ವಿಶೇಷ ತಿಳಿಸಿದಳು. ದಾಸಿ ಹತ್ತಿರ ಈ ಹಣ್ಣನ್ನು ಪ್ರಶ್ನಿಸಿದರೆ ಕುದುರೆಪಾಲಕ ಕೊಟ್ಟ ಅಂತ ಗೊತ್ತಾಯ್ತು. ಅವನನು ಕರೆತಂದು ವಿಚಾರಿಸಿದರು ಏನೇನೋ ಕಥೆ ಹೇಳಿ ತಪ್ಪಿಸಿಕೊಳ್ಳಲು ನೋಡಿದ. ಕಡೆಗೆ ಸತ್ಯ ಒಪ್ಪಿಕೊಂಡು ರಾಣ ಕೊಟ್ಟಳು ಅಂದ. ಭರ್ತೃಹರಿಗೆ ಅಘಾತವಾಯಿತ್ತು ತಾನು ಪ್ರಾಣಕ್ಕಿಂತ ಹೆಚ್ಚಾಗಿ ನಂಬಿದ,ಪ್ರೀತಿಸಿದ ಹೆಂಡತಿ ಬೆನ್ನ ಹಿಂದೆ ಮೋಸ ಮಾಡಿದಳು. ಈ ಸುದ್ದಿ ರಾಣಿಳಿಗೆ ತಲುಪಿತ್ತು. ತನಗೆ ಸಾವು ಖಚಿತ ಎಂದು ತಿಳಿದು ರಾಜನಿಗೆ ವಿಷಹಾಕಿದ ಪಾಯಸ ತಯಾರಿಸಿದಳು. ಪ್ರೀತಿ ನಟಿಸುತ್ತಾ "ನಿಮಗಾಗಿ ತಯಾರಿಸಿದ್ದೇನೆ" ಎಂದಳು ರಾಜ ಒಂದೂ ಮಾತಾನಾಡದೆ ರೇಷಿಮೆಯ ವಸ್ತ್ರ ಆಭರಣ ತೆಗೆದಿರಿಸಿ, ಒಂದು ಮಣ್ಣು ಹಿಡಿಯನ್ನು ತೆಗೆದುಕೂಂಡು ಹೋದ. ಅವನು ಹೊಸ್ತಿಲು ದಾಟಿದ ತಕ್ಷಣ ಅರಮನೆ ಭಗ್ಗನೆ ಹೊತ್ತಿ ಉರಿದು ಭಸ್ಮವಾಗಿ ಹೋಯಿತ್ತು.

ಹೀಗೆ ಏಕಾಂಗಿಯಾಗಿ ಭರ್ತೃಹರಿ ಊರೂರು ಅಲೆಯುತ್ತಾ ಕಡೆಗೆ ಚಿದಂಬರಗೆ ಬಂದ. ದೇವಸ್ಥಾನದ ಮುಂದೆ ಕುಳಿತು ಒಂದು ಮಡಕೆಯನ್ನು ಉಪಯೋಗಿಸುತ್ತಾ ಯಾರಾದರು ನೀಡಿದರೆ ಅದರಲ್ಲಿ ಹಾಕಿ ತಿನ್ನುತ್ತಿದ್ದ, ಇಲ್ಲದಿದ್ದರೆ ಇಲ್ಲ. ಅವನ ಮುಂದೆ ಪಟ್ಟನತ್ ಪಿಳ್ಳೆ ಎನ್ನುವಾತ ಬಂದು. ನಗುತ್ತಾ "ಮಡಕೆ ಮುಂದಿಟ್ಟುಕೊಂಡಿರುವವ, ನೀನೆಂಥ ವಿರಕ್ತ " ಎಂದ. ಭರ್ತೃಹರಿಗೆ ಸನ್ಯಾಸದ ಯೋಚನೆ ಅದಾಗಲೇ ಬಂದಿತ್ತು ಅವನು ಪಿಳ್ಳೆ ಹೇಳಿದ ಮಾತಿನಲ್ಲಿ ಸತ್ಯವಿದೆ ಎಂದರಿತು ಮಡಕೆಯೆನ್ನೆತ್ತಿ ನೆಲಕ್ಕೆ ಬಡಿದ. ಹೀಗೆ ಸರ್ವಸ್ವ ತ್ಯಾಗ ಮಾಡಿದ ಪರಮ ವಿರಕ್ತನಾಗಿ ಮುಂದೆ ಜಗತ್ ವಿಖ್ಯಾತನಾದ.

## ಟೀ ಕುಡಿದ ಮೇಲೆ ಲೋಟ ಬಿಸಾಡಬೇಡಿ ತಿನ್ನಿ... ಇದು ಬಿಸ್ಕತ್ ಟೀ

-ಪ್ರೇಮ ಎಚ್ ಕೆ

ಸೂರ್ಯ ತನ್ನ ದೈನಂದಿನ ಕೆಲಸಕ್ಕೆ ಹಾಜರಿ ಹಾಕಿದ ಕ್ಷಣದಿಂದ ಹೊಸ ದಿನದ ಪ್ರಾರಂಭದ ಸಂಕೇತ. ಹೊಸ ದಿನದ ಪ್ರಾರಂಭ ಆಗುವುದು ಒಂದು ಕಪ್ ಚಹಾದಿಂದ. ಚಹಾದ ಉತ್ತಮ ಜೋಡಿ ಬಿಸ್ಕತ್ತು ಎಂದರೆ ತಪ್ಪಗಾಲಾರದು. ಈ ಜೋಡಿಗೆ ವಿನೂತನ ರೂಪ ಕೊಡುವ ದೃಷ್ಟಿಯಿಂದ ಬಿಸ್ಕತ್ತು ಚಹಾ ಎನ್ನುವ ಮಾರ್ಕೇಟ್ ಪರಿಚಯಿಸಿದ್ದು, "ಟೀ ಕುಡಿರಿ ಲೋಟ ತಿನ್ನಿ" ಬಿಸ್ಕತ್ತು ಚಹಾದ ಸಂದೇಶ.



ಸಾಮಾನ್ಯವಾಗಿ ಟೀ ಗಾಜು, ಪ್ಲಾಸ್ಟಿಕ್, ಸ್ಟೀಲ್ ಅಥವಾ ಮಣ್ಣಿನ, ಪೇಪರ್ ಲೋಟ ಗಳಲ್ಲಿ ಕೊಡುವುದು ಸರ್ವೇಸಾಮಾನ್ಯ. ಆದರೆ ಟೀ ಅನ್ನು ಒಂದು ಖಾದ್ಯ ಕಪ್ ನಲ್ಲಿ ನೀಡಲಾಗುತ್ತಿದ್ದು, ಈ ಲೋಟ ಐಸ್ ಕ್ರೀಮ್ ಶಂಕುವಿನಿಂದ ತಯಾರಿಸಲಾಗುತ್ತದೆ. ಚಾಕೋಲೇಟ್ ರುಚಿಯನ್ನು ಹೊಂದಿದ್ದು ಈ ಪರಿಸರಸ್ನೇಹಿ ಚಹಾ, ಚಹಾ ಪ್ರೀಯರನ್ನು ಚಹಾ ಪ್ರಿಯರ ಹೊಮ್ಮಸನ್ನು ಇನ್ನೂ ದ್ವಿಗುಣಗೊಳಿಸಿದೆ.

**ಬಿಸ್ಕತ್ತು ಚಹಾ ಹೆಸರು ಹೇಗೆ ಬಂತು?**

ಟೀ ಅನ್ನು ಬಿಸ್ಕೆಟ್ ಕಪ್ ನಲ್ಲಿ ಕೊಡುವುದರಿಂದ ಇದಕ್ಕೆ ಬಿಸ್ಕತ್ತು ಚಹಾ ಎಂದು ಕರೆಯಲಾಗುತ್ತದೆ. ಬಿಸ್ಕತ್ತು ಚಹಾ ಹೆಸರಿನಲ್ಲಿ ಕುತೂಹಲ ಆಡಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಟೀ ಬಿಸ್ಕೆಟ್ ಕಪ್ಪನ್ನು ಇಷ್ಟ ಪಟ್ಟು ಕುಡಿಯುತ್ತಾರೆ. ಕೆಲವರು ಬಿಸ್ಕೆಟ್ ಗಾಗಿ ಕುಡಿದರೆ ಇನ್ನೂ ಕೆಲವರು ಟೀ ಗಾಗಿ ಕುಡಿಯುವುದುಂಟು. ಮೊದಲು ಬಿಸ್ಕತ್ತು ಚಹಾ ಸದ್ದು ಮಾಡಿದ್ದು ಕೇರಳದ ತ್ರಿಶೂರ್ ಪಟ್ಟಣ್ಣ ಬೇಕರಿಯೊಂದರಲ್ಲಿ. ತಮಿಳುನಾಡಿನನಲ್ಲಿ ನಂತರ ಕೇರಳ. ಇದೀಗ ನಮ್ಮ ತುಳುನಾಡಿನಲ್ಲಿ ಬಿಸ್ಕತ್ತು ಚಹಾ ಹಗ್ಗೆ ಇಟ್ಟಿದ್ದು ನಗರದ ಕಲ್ಲಾಪುವಿನಲ್ಲಿ "ದಿ ಚಾಯ್ ಚೌಕ್' ಎಂಬ ಚಹಾ ಸ್ಟೋಲ್ ನಲ್ಲಿ ದೊರೆಯುತ್ತದೆ.

**ಬಿಸ್ಕತ್ತು ಚಹಾ ಮಾಡುವ ವಿಧಾನ:**

ಚಹಾದಲ್ಲಿ ಹಲವಾರು ವಿಧಗಳಿವೆ ಅಸ್ಸಾಂ ಟೀ, ಕಪ್ಪು ಚಹಾ, ಮಸಲಾ ಚಾಯ್, ಹಸಿರು ಚಹಾ, ಜಾಸ್ಮಿನ್ ಟೀ ಈ ಪಟ್ಟಿಯಲ್ಲಿ ಹೊಸದಾಗಿ ಬಿಸ್ಕತ್ತು ಚಹಾ ಕೂಡ ಸೇರ್ಪಡೆಗೊಂಡಿದೆ. ಬಿಸ್ಕತ್ತು ಚಹಾ ಮಾಡುವ ವಿಧಾನ ಸಾಮಾನ್ಯವಾಗಿ ಭಾರತೀಯರು ಸದಾ ಟೀ ಮಾಡುವ ರೀತಿಯೇ. ಒಂದು ಕಪ್ ಹಾಲುಗೆ ಚಹಾ ಎಲೆಗಳನ್ನು ಹಾಕಿ ಕುದಿಸಿ ಚಹಾ ತಯಾರದ ಮೇಲೆ ಗಾಜು, ಪ್ಲಾಸ್ಟಿಕ್, ಸ್ಟೀಲ್ ಚಹಾವನ್ನು ಹಾಕದೆ ಬದಲಾಗಿ ಲೋಟದ ಆಕಾರದಲ್ಲಿ ಮೊದಲೆ ತಯಾರಿಸಿದ ಬಿಸ್ಕತ್ತು ಲೋಟಕ್ಕೆ ಹಾಕುವುದು. ಏಲಕ್ಕಿ, ಕೇಸರಿ, ಬಿಳಿ ಎಲ್ಲು, ವೆನಿಲ್ಲಾ ಹಾಗೂ ಸದಾ ಚಹಾ ರುಚಿಯಲ್ಲಿ ಲಭ್ಯವಿದ್ದು, ಮೊದಲೆ ಸಿದ್ಧವಾಗಿರಿಸಿದ ಬಿಸ್ಕತ್ತು ಚಹಾಗೆ ಚಹಾ ಪ್ರೀಯರು ಯಾವ ರುಚಿಯನ್ನು ಇಷ್ಟ ಪಡುತ್ತಾರೆ ಆ ರುಚಿಯ ಸಾಮಾಗ್ರಿಯನ್ನು ಸೇರಿಸುವುದು. ಬಿಸ್ಕತ್ತು ಬಿಸ್ಕೆಟ್ ನ ಬೆಲೆ 30 ರೂ. ಯಿಂದ 40 ರೂ. ವರೆಗೆ ಲಭ್ಯವಿದೆ.

**ಬಿಸ್ಕತ್ತು ಚಹಾ ಕಪ್‌ನ ವಿಶೇಷತೆ:**

ಈ ಕಪ್ 60 ಮಿಲಿ ಬಿಸಿ ಟೀ ಅನ್ನು ಹತ್ತರಿಂದ ಹದಿನೈದು ನಿಮಿಷಗಳ ಕಾಲ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. 2019ರಲ್ಲಿ ದೇಶದಾದ್ಯಂತ ಪ್ಲಾಸ್ಟಿಕ್ ಕವರ್ ಬಳಕೆಗೆ ಸರ್ಕಾರವು ನಿಷೇಧವನ್ನು ಹೇರಿದ್ದು 2020ರಲ್ಲಿ ಈ ಹೊಸ ಉತ್ಪನ್ನವನ್ನು ಜಾರಿಗೆ ತರಲಾಗಿದ್ದು ಪ್ಲಾಸ್ಟಿಕ್ ಬಳಕೆಯನ್ನು ತಡೆಯುವುದಕ್ಕೆ ಪರ್ಯಾಯ ಮಾರ್ಗವಾಗಿದೆ.

## ಸಾಫ್ಟ್ ಬಾಲ್ ಆಟದಲ್ಲಿ ಮಿಂಚುತ್ತಿರುವ ಯುವ ಪ್ರತಿಭೆ "ವಿಜಯ್ ವಿಸೆಂಟ್"

-ಶರಣ್ಯ ಕುಮಾರಿ ಕೆ.



ಸಾಧನೆಯ ಉತ್ತುಂಗಕ್ಕೇರಲು ನಿರಂತರ ಪರಿಶ್ರಮ, ಮನಃಪೂರ್ವಕ ಆಸಕ್ತಿ, ಶ್ರದ್ಧೆ ಇರಬೇಕು. ಸಾಧನೆ ಎಂಬುದು ಸುಲಭ ಸಾಧ್ಯವಲ್ಲ, ಸಾಧಿಸುವ ಮಾರ್ಗವು ಕೂಡ ಸರಾಗವಲ್ಲ. ಆದರೆ ಸಾಧಿಸುವ ಛಲ, ಸಾಧಿಸುತ್ತೇನೆ ಎಂಬ ಆತ್ಮಸ್ಥೈರ್ಯ , ನಂಬಿಕೆ ಇದ್ದರೆ ಸಾಧಕ ಸಾಧನೆಯ ಹಾದಿಯಲ್ಲಿ ಯಶಸ್ವಿಯಾಗಿ ಮುನ್ನಡೆಯಬಲ್ಲ.

ಸಾಫ್ಟ್ ಬಾಲ್ ಆಟಗಾರ ವಿಜಯ್ ವಿನ್ಸೆಂಟ್ ನಿರಂತರ ಪರಿಶ್ರಮ, ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸದೊಂದಿಗೆ ಸಾಫ್ಟ್ ಬಾಲ್ ಕ್ರೀಡೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾರೆ. ಮೂಲತಃ ಇವರು ಬೆಳ್ತಂಗಡಿ ತಾಲ್ಲೂಕಿನ ಅಳದಂಗಡಿಯಲ್ಲಿ ಜನಿಸಿದ್ದು, ತಾಯಿ ಲೀನಾ ಮೋರಸ್, ತಂದೆ ಪ್ರಶಾಂತ್ ವೇಗಸ್ ರವರ ಹಿರಿಯ ಮಗ.ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಉಜಿರೆ ಅನುಗ್ರಹ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪೂರೈಸಿದ್ದು, ಪದವಿಪೂರ್ವ ಶಿಕ್ಷಣವನ್ನು ಮಡಂತ್ಯಾರ್ ಸೇಕ್ರೆಡ್ ಹಾರ್ಟ್ ಪಿ.ಯು ಕಾಲೇಜಿನಲ್ಲಿ ಹಾಗೂ ಪದವಿ ಶಿಕ್ಷಣವನ್ನು ಮಂಗಳೂರು ಅಲೋಶಿಯಸ್ನಲ್ಲಿ ಪೂರೈಸಿದ್ದಾರೆ.

ಪ್ರಸುತ್ತ ಮಂಗಳೂರು ವಿಶ್ವವಿದ್ಯಾನಿಲಯ ವಿಜ್ಞಾನ ವಿಭಾಗದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಬಾಲ್ಯದ ದಿನಗಳಲ್ಲಿ ಆಟದ ವಸ್ತುಗಳಲ್ಲಿ ನನಗೆ ಅತ್ಯಂತ ಇಷ್ಟವಾದ ಆಟದ ವಸ್ತು ಬಾಲ್. ಪದವಿ ಶಿಕ್ಷಣದ ಹಂತದಲ್ಲಿ ಸಾಫ್ಟ್ ಬಾಲ್ ಆಟದ ಗುಣಲಕ್ಷಣದ ಬಗ್ಗೆ ತಿಳಿದುಕೊಂಡೆ. ಇಲ್ಲಿಂದ ನನ್ನ ಕ್ರೀಡ ಜೀವನದ ಪ್ರಾರಂಭ, ಸಾಫ್ಟ್ ಬಾಲ್ ಆಟದಲ್ಲಿ ಏನದರೂ ಸಾಧನೆ ಮಾಡಬೇಕು ಎಂದು ನಿರ್ಧರಿಸಿದೆ. ಸಾಫ್ಟ್ ಬಾಲ್ ಆಟದ ತರಬೇತಿ ದೈಹಿಕ ಶಿಕ್ಷಕರಾದ ಅರುಣ್ ಡಿಸೋಜ, ಹಿರಿಯ ವಿದ್ಯಾರ್ಥಿಗಳಿಂದ ಹಾಗೂ ಮಂಗಳೂರು ವಿಶ್ವ ವಿದ್ಯಾನಿಲಯದ ದೈಹಿಕ ಶಿಕ್ಷಕರಾದ ಸಂದೀಪ್ ಅವರಿಂದ ತರಬೇತಿ ಪಡೆಯುತ್ತಿದ್ದೇನೆ.

ಆಟಗಾರರ ತಂಡದಲ್ಲಿ ಕ್ಯಾಚರ್ ಆಗಿ ಹೊರ ಹೊಮ್ಮಿದ ನಾನು ಬೆಳಗ್ಗೆ ಹಾಗೂ ಸಂಜೆಯ ಹೊತ್ತು ಎರಡು ಗಂಟೆಗಳ ಕಾಲ ಕಠಿಣ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುತ್ತಿದೆ ಎಂದು ವಿಜಯ್ ಮಾಧ್ಯಮ ಮಂಗಳ ಪತ್ರಿಕೆಗೆ ಹೇಳುತ್ತಾರೆ.

**ಸಾಫ್ಟ್ ಬಾಲ್ ಆಟಗಾರ ವಿಜಯ್ ವಿನ್ಸೆಂಟ್ ಸಾಧನೆಯ ಹಾದಿ:**

2019 ಹಾಗೂ 2020ರಲ್ಲಿ ಮುಂಬೈ ಮತ್ತು ಆಂಧ್ರಪ್ರದೇಶದಲ್ಲಿ ನಡೆದ ರಾಷ್ಟ್ರ ಮಟ್ಟದ " ಆಲ್ ಇಂಡಿಯಾ ಇಂಟರ್ ಯುನಿರ್ವಸಿಟಿ" ಪಂದ್ಯಾಟದಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯ ತಂಡವನ್ನು ಪ್ರತಿನಿಧಿಸಿದ್ದಾರೆ.

ಪಿ.ವಿ.ಎಸ್ ಕಾಲೇಜು ಮತ್ತು ಆಲೋಶಿಯಸ್ ಕಾಲೇಜಿನಲ್ಲಿ ನಡೆದ ಸ್ಪರ್ಧೆಯಲ್ಲಿ ಮೊದಲ ಸ್ಥಾನವನ್ನು ತನ್ನದಾಗಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸ್ಪರ್ಧೆಗಳಲ್ಲಿ ಭಾಗವಹಿಸಿದ ಅನುಭವವಿದ್ದು, ಸ್ಥಳೀಯ ಮಟ್ಟದ ಹಲವು ಚಾಂಪಿಯನ್‌ಶಿಪ್‌ಗಳಲ್ಲಿ ಪಾಲ್ಗೊಂಡಿದ್ದಾರೆ.

ಸಾಫ್ಟ್ ಬಾಲ್ ಜೊತೆಗೆ ಫುಟ್ಬಾಲ್ ಆಟದಲ್ಲು ಕೂಡ ಆಸಕ್ತಿಯನ್ನು ಹೊಂದಿದ್ದು, ಬಿ.ಎಮ್ ಸುಕುಮಾರ್ ಶೆಟ್ಟಿ ರೋಲಿಂಗ್ ಪ್ರಶಸ್ತಿ ಪಾತ್ರರಾಗಿದ್ದಾರೆ.




> ಒಂದು ಮಾತು ಸದಾ ನೆನಪಲಿ ಇರುವುದು ಏನು ಎಂದರೆ ಮ್ಯಾಚ್‌ನ ಕೊನೆಯ ಎಸೆತದವರೆಗೂ ನಾವು ಸೋಲುತ್ತವೆ ಎಂದು ಇರಬಾರದು ಬದಲಾಗಿ ಗೆಲ್ಲುತ್ತೆವೆಯೆಂಬ ಮನಸ್ಥಿತಿಯಲ್ಲಿ ಇರಬೇಕು.

**ಮುಂದಿನ ಯೋಜನೆ:**

ವ್ಯಾಸಾಂಗ ಪೂರೈಸಿದ ಬಳಿಕ ಬೇಸ್ ಬಾಲ್ ನಲ್ಲಿ ಇನ್ನಷ್ಟು ಸಾಧನೆಯ ಗುರಿಯನ್ನು ಹೊಂದಿದ್ದಾರೆ. ಮುಂಬರುವ ದಿನಗಳಲ್ಲಿ ಬೆಂಗಳೂರಿನಲ್ಲಿ ಉತ್ತಮ ಸಾಫ್ಟ್ ಬಾಲ್ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಯೋಜನೆ ಇದೆ.

## "ಬೀದಿನಾಯಿ" ಸಣ್ಣ ಕಥೆಯ ಪುಸ್ತಕ ವಿಮರ್ಶೆ

-ಶರಣ್ಯ ಕುಮಾರಿ ಕೆ.




ಲೇಖಕರಾದ ಉದಯ ಸರ್ಪಮಲೆ ಅವರ "ಬೀದಿನಾಯಿ" ಸಣ್ಣ ಕಥೆಯನ್ನು ಎರಡು ಮೂರು ಸಲ ಓದಿದ್ದೇನೆ ಆದರೆ ಇಂದೇಕೋ ಬರೆಯಬೇಕೆನಿಸಿತು. ಅದೊಂದು ಬೀದಿನಾಯಿ ಸ್ವಾಗತ ಅದರ ಬದುಕು ,ಬವಣೆಗಳನ್ನು ಎಳೆ-ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಮೇಲ್ನೋಟಕ್ಕೆ ಇದೊಂದು ಮಕ್ಕಳ ಕತೆ ಎನಿಸಬಹುದು.

ಆದರೆ ಇದು ಮಾನವನಿಗಿಂತಲೂ ಶ್ರೇಷ್ಠ ಸ್ಥಾನದಲ್ಲಿರುವ "ಬೀದಿನಾಯಿ"ಯ ಪ್ರಬುದ್ಧ ಕಥೆ. ಒಂದು ಮನೆಯ ಸಾಕು ನಾಯಿಗೆ ಹುಟ್ಟಿದ ಮರಿಗಳು ಹೆಣ್ಣಾಗಿದ್ದರೆ ಆ ಮನೆಯವರ ಚಿಂತನೆಯೆ ವಿಭಿನ್ನವಾಗಿರುತ್ತದೆ. ಇಂತಹ ಆಲೋಚನೆ ಕೆಲವು ಮನೆಯಲಲ್ಲಿ ಹೆಣ್ಣು ಮಗುವಾದಗ ಕಾಣಸಿಗುತ್ತವೆ. ಗಂಡು ಮರಿಗಳಾದಾಗ ತೋರುವ ಪ್ರೀತಿ, ಹೆಣ್ಣು ಮರಿಗಳಾದಾಗ ಸಿಗುವುದಿಲ್ಲ.

ಮನುಷ್ಯನಲ್ಲಿಯೂ ಗಂಡು ಮರಿಗೆ ಊರಲೆಲ್ಲ ಡಿಮ್ಯಾಂಡು. ಅದೇ ಹೆಣ್ಣು ಮರಿಯಾದರೆ ಊರಿನಲ್ಲಿ ಯಾರಿಗೂ ಸುದ್ದಿ ತಿಳಿಸದೆ ಏಕಾಏಕಿ ಗೋಣಿ ಚೀಲದಲ್ಲಿ ಎತ್ತಿಕೊಂಡು ಯಾವುದೊ ರಸ್ತೆಯಲ್ಲಿ ಬಿಟ್ಟು ಹಿಂದಿರುಗುವ ಜನರ ಅಮಾನವೀಯತೆಯನ್ನು ತಿಳಿಸುತ್ತಾ.

ನಾಯಿ ಮರಿಗಳು ದಿಕ್ಕುದೆಸೆ ಇಲ್ಲದೆ ಅಡ್ಡಾಡಿ ಸಿಕ್ಕ ಆಹಾರದ ತುಣುಕುಗಳನ್ನು ತಿನ್ನುತ್ತಾ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳ ಅಡಿಗೋ ಬಿದ್ದು ಅಪ್ಪಚ್ಚಿಯಾಗಿ ಜೀವ ಕಳೆದುಕೊಳ್ಳುತ್ತದೆ. ಇನ್ನೂ ಕೆಲವು ಆಹಾರ ಅರಸುತ್ತಾ ಯಾರದೋ ಮನೆಗೆ ಅಥವಾ ಯಾವುದೋ ಹೋಟೆಲ್ ಹೀಗೆ ಎಲ್ಲಾದರೂ ಆಹಾರ ತಿಂದು ಬದುಕಿಕೊಳ್ಳುತ್ತವೆ... ಆ ಹೆಣ್ಣುನಾಯಿಗಳು, ಮರಿಗಳನ್ನು ಹೆತ್ತು ಮರಿಗಳಿಗೆ ಆಹಾರ ತಂದುಕೊಡುತ್ತಾ ಮರಿಗಳು ಬೆಳೆದಂತೆ ಯಾರಾದರೂ ಕದ್ದೊಯ್ಯುವ ಪ್ರಕ್ರಿಯೆಗಳು ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಇಲ್ಲಿ ನಾಯಿಯ ಸ್ವಗತವನ್ನು ಯಾರು ಅರಿಯುವ ಪ್ರಯತ್ನ ಮಾಡುವುದಿಲ್ಲ.ಬದಲಾಗಿ ಸಿಕ್ಕಸಿಕ್ಕ ಕಲ್ಲು ದೊಣ್ಣೆಗಳಿಂದ ಘಾಸಿಗೊಳಿಸುತ್ತಾರೆ.

ಮಾನವರ ಕ್ರೂರ ನಡೆ ,ಕಠೋರ ಮನಸ್ಥಿತಿಯನ್ನು ಒಂದು ಬೀದಿನಾಯಿಯು ತನ್ನ ಆತ್ಮಕಥೆಯನ್ನು ತಿಳಿಸುವಂತೆ ಲೇಖಕರು ಕಥೆಯನ್ನು ಹೆಣೆದಿದ್ದಾರೆ. ನಾಯಿಗಳನ್ನು ಪ್ರೀತಿಸುವ ನನಗೆ ಈ ಕಥೆ ನಾಯಿಗಳ ಮೇಲಿನ ಪ್ರೀತಿಯನ್ನು ಇನ್ನೂ ಹೆಚ್ಚು ಮಾಡಿಸಿತು ಎನ್ನಬಹುದು.

ನಮ್ಮ ಮನೆಯ ಸಾಕುನಾಯಿಗಳು ಸತ್ತಾಗ ತುಂಬಾ ಬೇಸರವಾಗುತ್ತದೆ. ಯಾಕೆಂದರೆ ನಾವದನ್ನು ಪ್ರೀತಿಯಿಂದ ಸಾಕಿರುತ್ತೇವೆ. ನಾಯಿಯು ಮನೆಯ ಸದಸ್ಯ ನಂತಿರುವ ನಿಯತ್ತಿನ ಪ್ರಾಣಿ.

ಜನ ಮರೆತರು ಒಂದು ಹೊತ್ತು ಅನ್ನ ಹಾಕಿದರು ನಾಯಿ ಮರೆಯದು .ಬುತ್ತಿ ಕಟ್ಟಿಕೊಂಡು ಹೋಗುವ ನಮ್ಮ ಕಾಲೇಜು ಜೀವನದಲ್ಲಿ ಹಾಸ್ಟೆಲಿನ ಊಟ ಎಂದರೆ ಯಾಕೋ ಉದಾಸೀನ... ಹೆಚ್ಚಿನ ಬಾರಿ ಗೆಳೆಯರೊಂದಿಗೆ ಟಿಫನ್ ಹಾಗೆ ಬಿಟ್ಟು ಕ್ಯಾಂಟೀನಲ್ಲಿ ಬಿಸಿಯೂಟ ತಿಂದು ಬರುವುದುಂಟು. ಆ ದಿನಗಳು ಟಿಫನ್ ನಲ್ಲಿರುವ ಅನ್ನವನ್ನು ಕಸದ ತೊಟ್ಟಿ ಗೆ ಸುರಿಯುವ ಬದಲು ಕಾಲೇಜಿನ ಎದುರು ಮಲಗಿರುವ ನಾಯಿಗಳಿಗೆ ಹಾಕಿ ಅದು ಹೊಟ್ಟೆ ತುಂಬಿಸಿಕೊಂಡಾಗ ಏನೋ ತೃಪ್ತಿ ಭಾವ ಮೂಡುತ್ತದೆ.

ನಾಯಿ ಬೆಕ್ಕುಗಳಂತ ಸಾಕುಪ್ರಾಣಿಗಳಿಗೆ ಮಾನವ ಬೇಯಿಸಿ ಹಾಕುವ ಆಹಾರವೇ ಮೂಲವಾಗಿರುತ್ತದೆ. ನಾವು ತಿನ್ನುವ ಆಹಾರವನ್ನು ಹಾಳುಮಾಡಿ ಬಿಸಾಡುವ ಬದಲು ಮೂಕ ಪ್ರಾಣಿಗಳಿಗೆ ತಿನ್ನಲು ಕೊಟ್ಟರೆ ಅದೊಂದು ಪುಣ್ಯದ ಕೆಲಸ ಅಲ್ಲವೇ?...

ಉದಯ ಸರ್ಪಮಲೆ ಅವರ ಬೀದಿನಾಯಿ ಎಂಬ ಸಣ್ಣ ಕತೆಯಲ್ಲಿ ಪ್ರಾಣಿಗಳ ಮೇಲೆ ಮಮತೆಯ ಮಾನವೀಯತೆಯನ್ನು, ಕಾಳಜಿಯನ್ನು ಸಾಮಾಜಿಕ ಬೀದಿನಾಯಿ ಪುಸ್ತಕದ ಮೂಲಕ ಜನರಿಗೆ ಉತ್ತಮ ಸಂದೇಶವನ್ನ ನೀಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ {ಖಾಸಗಿ ಪ್ರಸಾರಕ್ಕಾಗಿ ಮಾತ್ರ}

# ಮರೆಯಾಯಿತೆ ನಲಿಕಲಿ ಜೀವನ

–ಗಣೇಶ್ ಪಿ ಎಮ್

ಕನ್ನಡ ಮಾಧ್ಯಮ ಎಂದರೆ ಸಾಕು ಎಲ್ಲರೂ ಅವರನ್ನು ನೋಡುವ ದೃಷ್ಟಿಕೋನವೇ ಬೇರೆ ಆದರೆ ಅವ-ರಿಗೇನು ಗೊತ್ತು ನಮ್ಮ ಕನ್ನಡ ಮಾಧ್ಯಮದ ಬಗ್ಗೆ. ಇಂದಿಗೂ ಅದರ ನೆನಪುಗಳು ಮನಸ್ಸಿನಂಗಳದ ತುಂಬು ಹಸಿರು. ವಿಪರ್ಯಾಸವೆಂದರೆ ಇಂದಿನ ದಿನಗಳಲ್ಲಿ ಕನ್ನಡ ಮಾಧ್ಯಮವನ್ನು ಮರೆಸುವಂಥ, ಆಂಗ್ಲ ಭಾಷೆಯನ್ನೇ ಹಾಸುಂಡು ಮಲಗುವ ಅದೆಷ್ಟೋ ಖಾಸಗಿ ಐಷರಾಮಿ ಶಾಲೆಗಳು ದೈತ್ಯಾಕಾರವಾಗಿ ಬೆಳೆದು ನಿಂತಿವೆ. ಆದರೆ ಇವುಗಳ ಐಲುಪೈಲುಗಳು ಅಪ್ಪ ಅಮ್ಮನನ್ನು ಡ್ಯಾಡಿ ಮಮ್ಮಿಗಳನ್ನಾಗಿಸಿ, ಇಡ್ಲಿ ಕಡುಬುಗಳನ್ನ ರೌಂಡ್ ಪುಟ್ಟ್, ಕಟ್ ಪುಟ್ಟ್‌ಗಳನ್ನಾಗಿಸಿ ನೆಲದ ಭಾಷಾ ಸೊಗಡನ್ನು ಅಪೋಶನ ತೆಗೆದುಕೊಂಡು ಬಿಟ್ಟಿವೆ. ನಾವು ನಮ್ಮ ಬಾಲ್ಯದ ಹೆಚ್ಚಿನ ಸಮಯವನ್ನು ಕಳೆದಿದ್ದು ಸರ್ಕಾರಿ ಶಾಲೆಯ ಆಟದ ಮೈದಾನದಲ್ಲಿ. ಆ ಸಮಯದಲ್ಲಿ ನಮ್ಮ ಮನಸ್ಸಿನಲ್ಲಿ ಯಾವುದೇ ರೀತಿಯ ಕಲ್ಮಶಗಳಾಗಲಿ ಕೆಟ್ಟ ಆಲೋಚನೆಗಳಾಗಲಿ ಇಲ್ಲದ ಸಮಯ. ಅಲಿ ಯಾವ ಜಾತಿಯೂ ಇಲ್ಲ ಧರ್ಮವು ಇಲ್ಲ ಎಲ್ಲರೂ ನಮ್ಮವರೇ ಎಂಬ ಭಾವನೆ. ಕನ್ನಡ ಮಾಧ್ಯಮದಲ್ಲಿ ಮಧ್ಯಾಹ್ನ ಸಿಗುವ ಬಿಸಿಯೂಟ ಇದೆಯಲ್ಲಾ ಎಷ್ಟು ಹೇಳಿದರೂ ಸಾಲದು. ಅದರ ರುಚಿ ಯಾವುದೇ ಹೋಟೆಲ್‌ನಲ್ಲಿ ಕೂಡ ಸಿಗುವುದಿಲ್ಲ .ಶಾಲೆಗೆ ಹೋಗುವುದಿಲ್ಲ ಎಂದು ಹಠ ಮಾಡಿ ಕುಳಿತ ಕ್ಷಣಗಳು ಇನ್ನೂ ನಮ್ಮ ಮನಸ್ಸಿನಲ್ಲಿ ಅಳಿಯದೆ ಉಳಿದಿದೆ. ಗೆಳೆಯರೊಡನೆ ಮಾಡಿದ ಸಣ್ಣ ಪುಟ್ಟ ಗಲಾಟೆ , ಚೇಷ್ಟೆಗಳು ಇನ್ನೂ ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಹರಿದ ಶೂ ಹರಿದ ಚಡ್ಡಿ ಹಾಕಿಕೊಂಡೆ ಶಾಲೆಗೆ ಸಂತೋಷದಿಂದ ಹೋಗುತ್ತಿದ್ದೇವು. ಅದು ಕಲಿಸಿದ ಪಾಠ ಹೇಳಲಾಗದಷ್ಟು ಮತ್ತು ಒಂದು ತುತ್ತು ಅನ್ನಕ್ಕಾಗಿ ಕಷ್ಟಪಡುತ್ತಿದ್ದ ಮಕ್ಕಳಿಗೆ ನಮ್ಮ ಸರ್ಕಾರಿ ಶಾಲೆಗಳು ಹೊಟ್ಟೆ ತುಂಬಾ ಅನ್ನ ನೀಡುತ್ತಿತ್ತು.

ಇದೆಲ್ಲಾ ನಮ್ಮ ಸರ್ಕಾರಿ ಶಾಲೆಯ ಹೆಮ್ಮೆಯಲ್ಲವೇ . ಆ ಬಾಲ್ಯದಲ್ಲಿ ನಮಗೆಲ್ಲರಿಗೂ ಇಷ್ಟವಾಗುತ್ತಿದ್ದ ಅವಧಿ ಎಂದರೆ ಆಟದ ಅವಧಿ ಮತ್ತು ಶನಿವಾರ ಆಗುತ್ತಿದ್ದ ಯೋಗಾಸನ. ಅದರಲ್ಲೂ ಯೋಗಾಸನದಲ್ಲಿ ಮಾಡುತ್ತಿದ್ದ ಶವಾಸನ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು. ಬಾಲ್ಯದಲ್ಲಿ ಅದೆಷ್ಟು ಬೇಸರ ಆಯಾಸ ಇದ್ದರೂ ಕೂಡ ಸಂಜೆಯಾಗುತ್ತಿದ್ದಂತೆ ಗೆಳೆಯರೊಡನೆ ಆಟದ ಮೈದಾನದಲ್ಲಿ ಸೇರಿ ಆಟವಾಡಿದ ಕ್ಷಣ ಅಪ್ಪನ ಜೇಬಿನಿಂದ ಕದ್ದ ಅದೆಷ್ಟೋ ಚಿಲ್ಲರೆ ರುಪಾಯಿಗಳು. ಶಾಲೆಯಲ್ಲಿ ನಡೆಯುತ್ತಿದ್ದ ಶಾರದಾ ಪೂಜೆಗಳು ಇಂದಿಗೂ ಮರೆಯಲಾಗದ ಕ್ಷಣಗಳು. ಆದರೆ ಇತ್ತೀಚಿನ ದಿನಗಳಲ್ಲಿ ಮಕ್ಕಳ ಬಾಲ್ಯದ ಆಟದ ಮೈದಾನಗಳು, ಪಾಠ ಪ್ರವಚನದ ಕೊಠಡಿಗಳು ಮೊಬೈಲ್ನ ಕೀಗಳಲ್ಲಿ ಕಳೆದುಹೋಗಿವೆ. ಬಾಲ್ಯದಲ್ಲಿ ಆಟವೊಂದೇ ಜೀವನ ಎಂದುಕೊಂಡಿದ್ದ ನಮಗೆ ಯಾವಾಗ ತರಗತಿ ಮುಕ್ತಾಯವಾಗುತ್ತದೆ ಎಂದು ನೆನೆಯುತ್ತ ಎರಡು ಕಿವಿಗಳು ಗಂಟೆ ಶಬ್ದಕ್ಕಾಗಿ ಕಾಯುತ್ತಿದ್ದವು. ಇಂತಹ ಕ್ಷಣಗಳನ್ನು ಒಮ್ಮೊಮ್ಮೆ ನೆನೆಯುವಾಗ ಮುಖದಲ್ಲಿ ನಗು ತರಿಸುತ್ತದೆ. ಮನೆಗೆ ಹೋಗಬೇಕು ಎಂಬ ಅರಿವಿಲ್ಲದೆ ಶಾಲಾ ಮೈದಾನದಲ್ಲಿ ಬೆಳಗ್ಗೆಯಿಂದ ಸಂಜೆವರೆಗೂ ಆಟವಾಡಿ ಹೋದಾಗ ಅಪ್ಪ ಬಿದಿರಿನ ಕೋಲನ್ನು ಹಿಡಿದು ಮನೆಗೆ ಸ್ವಾಗತಿಸಿದ ರೀತಿ ಅದನ್ನು ಕಂಡು ಅಮ್ಮ ನಮ್ಮ ಪರವಾಗಿ ನಿಂತ ರೀತಿ,

ಮಾವಿನ ಮರಕ್ಕೆ ಕಲ್ಲೆಸೆದು ತೋಟದವನ ಮಗನ ತಲೆಗೆತಾಗಿ ಅವನಿಂದ ಒದೆ ತಿಂದದಲ್ಲದೆ ಮನೆಯಲ್ಲೂ ಸಿಕ್ಕ ಕರ್ಜಿಕಾಯಿ, ಶಾಲೆಗೆ ಚಕ್ಕರ್ ಹೊಡೆದು ಹೊಳೆಯಲ್ಲಿ ಈಜು ಕಲಿಯಲು ಹೋಗಿ, ದನಕಾಯುವ ಮಾದ ನಮ್ಮ ಒಳ ಚಡ್ಡಿಯನ್ನು ಬಿಡದೆ ಮನೆಗೆ ದೂರು ಸಮೇತ ಮುಟ್ಟಿಸಿದಾಗ ವಿಧಿಯಿಲ್ಲದೆ ನಡೆದ ನಮ್ಮ ನಗ್ನ ಮುನಿಗಳ ಮೆರವಣಿಗೆಗಳ ನೆನಪುಗಳು ಇಂದಿಗೂ ಮನಸ್ಸಿನಂಗಳದಲಿ ಮಾಸದೆ ಉಳಿದಿವೆ. ಆದರೆ ಪ್ರಸ್ತುತ ದಿನಗಳ ವಿಪರ್ಯಾಸಗಳು, ಹೊಲಸು ರಾಜ-ಕಾರಣದ ಸ್ವಾರ್ಥದ ನಡೆಗಳ ಕಾರಣ ನಮ್ಮ ನಡುವೆ ಸೃಷ್ಟಿಸುತ್ತಿರುವ ಗೋಡೆಗಳು, ಭ್ರಮಾಧೀನ ಶ್ರೇಷ್ಟತೆಯ ಪಾತಾಳದಗಲದ ಕಂದರಗಳು ಮನುಷ್ಯ ಮನುಷ್ಯನಾಗಿ ಬದುಕುವುದನ್ನೇ ಮರೆಸಿಬಿಟ್ಟಿವೆ. ಹುಚ್ಚು ಹಣದ ಹಪಾಹಪಿ, ಸಂಬಂಧಗಳಿಗೆರವಾದ ವ್ಯಾಪಾರಿ ಮನಸ್ಸುಗಳು, ಬಾಲ್ಯದ ಮನಸ್ಸಿನ ಕನಸುಗಳನ್ನೇ ಕೊಂದು ಬಿಟ್ಟಿವೆ. ತೋರಿಕೆಗಷ್ಟೇ ಸೀಮಿತಗೊಂಡ ಬ್ಯಾಗಡೆ ಬದುಕಿನ ಠಸ್ಸು ಪುಸ್ಸು ಇಂಗ್ಲೀಷ್ ಬದುಕು ಮನುಷ್ಯತ್ವದ ಝರಿಯನ್ನೇ ಇಂಗಿಸಿ ಬಿಟ್ಟಿವೆ. ಸುಡು ಮರಳ ಬೆಂಗಾಡಲ್ಲಿ ನಿಂತು ಅದೆಂದೋ ಕಳೆದು ಹೋದ ತುಂಬು ಹೊಳೆಯನ್ನು ನೆನಪಿಸಿಕೊಳ್ಳುವುದಷ್ಟೇ ಉಳಿದಿರುವ ಆಸರೆ. ಅಂದು ಮನುಷ್ಯರನ್ನ ರೂಪಿಸುತ್ತಿದ್ದ ಸರ್ಕಾರಿ ಶಾಲೆಗಳು ಗತ ವೈಭವಗಳಾಗಿ ಬಿಟ್ಟಿವೆ. ಸರ್ಕಾರಿ ಶಾಲೆಗಳ ಗೋರಿಗಳ ಮೇಲೆ ಆಧುನಿಕತೆಯ ಥಳಕು ಪಳುಕಿನ ಬದುಕ ಕಲಿಸುವ ಖಾಸಗಿ ಶಾಲೆಗಳೆಂಬ ವೈಯಾರಿಗಳ ಕುಣಿತ ಸಾಗಿಯೇ ಇದೆ.ಆದರೂ ಮನದ ಮೂಲೆಯಲ್ಲೊಂದಾಸೆ, ಮತ್ತೆ ಬಂದಾವೆ ಸರ್ಕಾರಿ ಶಾಲೆಗಳ ಆ ದಿನಗಳು...???.




# ಸರಕಾರಿ ಕೆಲಸವಿರುವುದು ಸೇವೆ ಮಾಡುವುದಕ್ಕಾಗಿ, ಅಧಿಕಾರ ತೋರಿಸಲು ಅಲ್ಲ

–ವರ್ಷ. ದ್ವಿತೀಯ ವಾಣಿಜ್ಯ ವಿಭಾಗ,
ಕಾಸ್ಟ್ರೀಟ್ ಕಾಲೇಜು ಮಂಗಳೂರು

"ವಿದ್ಯಾ ಹೀನಂ ಪಶು ಸಮಾನಂ" ಎಂದರೆ ವಿದ್ಯೆ ಇಲ್ಲದವನು ಪಶುವಿಗೆ ಸಮಾನ. ಆದರೆ ಕೆಲವೊಂದು ಸನ್ನಿವೇಶದಲ್ಲಿ ಇದಕ್ಕೆ ವಿರುದ್ಧವಾಗಿ ನಡೆಯುವವರು ಇದ್ದಾರೆ ಎರಡುತಿಂಗಳ ಹಿಂದೆ ನಡೆದ ಒಂದು ಘಟನೆಯ ಮೂಲಕ ತಿಳಿಯಿತು. ಅವತ್ತು ಬೆಳಿಗ್ಗೆ ಮೊಬೈಲ್ ಗೆ ಒಂದು ಕರೆ ಬಂದಿತ್ತು.

ನಾನೇನೋ ಕೆಲಸದಲ್ಲಿ ಇದ್ದದರಿಂದ ನನಗೆ ಕಾಲ್ ಬಂದದ್ದು ಕೇಳಿಸಲೇ ಇಲ್ಲ. ಕೆಲಸ ಮುಗಿಸಿ ಮನೆಯ ಒಳಗೆ ಬಂದಾಗ ಅಜ್ಜಿ ಹೇಳಿದರು ನಿನ್ ಫೋನ್ ರಿಂಗ್ ಆಗ್ತಿತ್ತು. ನಂತರ ಮೊಬೈಲ್ ನೋಡಿದಾಗ ಮೂರು ಕರೆ ಬಂದಿತ್ತು. ತಿರುಗಿ ಕಾಲ್ ಮಾಡಿದಾಗ ಅದು ಪೋಸ್ಟ್ ಮಾಸ್ಟರ್ ನ ಕರೆ ಆಗಿತ್ತು. ಆಗ ಅವರು ನಿಮ್ಮ ಸರ್ಟಿಫಿಕೇಟ್ ಇಲ್ಲಿ ಅಂಚೆ ಕಚೇ-ರಿಗೆ ಬಂದಿದೆ, ನಿಮ್ಮ ಅಡ್ರೆಸ್ಸ್ ಬೇಕಿತ್ತು ಅದಕ್ಕೆ ಆಗ ಕಾಲ್ ಮಾಡಿದ್ದು, ಈಗ ನಾನು ಹೊರಟು ಆಯಿತು. ನಾಳೆ ಅಥವಾ ನಾಡಿದ್ದು ನೀವು ಅಲ್ಲಿ ಬಂದು ತೆಗೆದುಕೊಂಡು ಹೋಗಿ ಎಂದು ಹೇಳಿದರು.

ಫೋನಿನಲ್ಲಿ ಮಾತನಾಡಿದ ನಂತರ ಅಜ್ಜಿ ಯಾರು ಅದು ಎಂದು ಕೇಳಿದರು. ನಾನು ಆಗ ,ಅದು ಪೋಸ್ಟ್ ಮಾಸ್ಟರ್ ಎಂದು ಅವರು ಹೇಳಿದ ವಿಷಯವನ್ನು ಹೇಳಿದೆ. ಆಗ ಅಜ್ಜಿ ಹೇಳಿದರು ಹಾಗಾದರೆ ನಾಳೆ ನಿನ್ನ ಒಟ್ಟಿಗೆ ನಾನ್ ಕೂಡ ಬರ್ತೇನೆ ನಂಗೆ ಪಾಸ್ ಬುಕ್ ಎಂಟ್ರಿ ಮಾಡ್ಲಿಕೆ ಇದೆ, ಮತ್ತೆ ಮೊನ್ನೆ ಆ ಪೋಸ್ಟ್ ಮಾಸ್ಟರ್ ಹೇಳಿದ್ದ ಏನೋ ಸೈನ್ ಹಾಕ್ಲಿಕೆ ಇದೆ ಅಂತ ಹೇಳಿದರು. ಮರುದಿನ ಪೋಸ್ಟ್ ಮಾಸ್ಟರ್ ಹೇಳಿದ ಟೈಮ್ ಗೆ ನಾನು ಮತ್ತು ಅಜ್ಜಿ ಒಟ್ಟಿಗೆ ಪೋಸ್ಟ್ ಆಫೀಸ್ ಕಡೆ ಹೋದೆವು. ನನಗೆ ಸರ್ಟಿಫಿಕೇಟ್ ಬೇಗನೆ ಸಿಕ್ಕಿತು.

ಆದರೆ ಅಜ್ಜಿಗೆ ಪಾಸ್ ಬುಕ್ ಎಂಟ್ರಿ ಮಾಡಿಸುವಾಗ ತುಂಬಾ ಹೊತ್ತು ಹಿಡಿತು. ಅಲ್ಲಿ ಬೆಂಚ್ ಮೇಲೆ ಸುಮಾರು ನಾಲ್ಕು- ಐದು ಜನ ಅಜ್ಜಿಯಂದಿರು ಕುಳಿತಿದ್ದರು. ಅವರ ಮುಂದೆ ಕ್ಲರ್ಕ್ ಹೆಂಗಸು ಕಂಪ್ಯೂಟರ್ ಮುಂದೆ ಕುಳಿತು, ಒಳಗಿದ್ದ ಪೋಸ್ಟ್ ಮಾಸ್ಟರ್ ಅಲ್ಲಿ ಮಾತನಾಡುತ್ತಿದ್ದರು. ಆಗ ಅಲ್ಲಿ ಕುಳಿತಿದ್ದ ಅಜ್ಜಿಯೊಬ್ಬರು ಎದ್ದು ನನ್ನ ಪಾಸ್ ಬುಕ್ ಒಂದು ಎಂಟ್ರಿ ಮಾಡಿ ಕೊಡು ಎಂದು ಕೇಳಿದರು.

ಆಗ ಆ ಕ್ಲರ್ಕ್ ನಿಮಗೇನು ಕಣ್ಣು ಕಾಣುವುದಿಲ್ವ , ನಾನಿಲ್ಲಿ ಒಬ್ಬರ ಎಂಟ್ರಿ ಮಾಡ್ತಿದ್ದೇನೆ, ನಿಮಗೆ ಅಷ್ಟು ಅವಸರ ಇದ್ರೆ ನಾಳೆ ಬನ್ನಿ, ಈಗಲೇ ಬೇಕು ಅಂತ ಆದ್ರೆ ನಾನು ಮಾಡಿ ಕೊಡುವುದಿಲ್ಲ, ಅಲ್ಲಿ ನಿಲ್ಲಿ ಅವರದ್ದು ಎಲ್ಲ ಆದ ಮೇಲೆ ಬನ್ನಿ ಎಂದು ದೊಡ್ಡ ಧ್ವನಿಯಲ್ಲಿ ಮುಖ ಕೆಂಪಾಗಿ ಗದರಿಸಿದರು. ಇದನ್ನು ಕೇಳಿದ್ದೆ ಅಜ್ಜಿ ಮುಖ ಬಾಡಿಸಿ ಆ ಬೆಂಚು ಮೇಲೆ ಕುಳಿತರು.

ಸುಮಾರು ಅರ್ಧ ಗಂಟೆ ನಂತರ ಅಜ್ಜಿಯ ಸರದಿ ಬಂತು. ಅಜ್ಜಿಯನ್ನು ಕರೆದು ಒಂದು ಸ್ಲಿಪ್ ಅನ್ನು ಕೊಟ್ಟು ಅದನ್ನು ಪೂರ್ತಿ ಮಾಡಿ ತನ್ನಿ ಎಂದು ಹೇಳಿದರು, ಅಜ್ಜಿ ಆ ಸ್ಲಿಪ್ ಅನ್ನು ನೋಡಿ, ಕ್ಲರ್ಕ್ ಅಲ್ಲಿಮಗ, ನನಗೆ ಅಕ್ಷರ ಓದಲು, ಬರೆಯಲು ಗೊತ್ತಿಲ್ಲ, ನೀನೇ ಇದನ್ನು ಪೂರ್ತಿ ಮಾಡಿ ಕೊಡು ಎಂದು ಹೇಳಿದರು. ಇದನ್ನು ಕೇಳಿದ್ದೆ ಆ ಕ್ಲರ್ಕ್ ಅಜ್ಜಿಯ ಮೇಲೆ ಮತ್ತೊಮ್ಮೆ ಸಿಡುಕಿದಳು.

ನಿಮಗೆ ಬೇಕಿದ್ದರೆ ನೀವೇ ಪೂರ್ತಿ ಮಾಡಿ, ನಾನು ನಿಮ್ಮ ಕೆಲಸ ಮಾಡಿದರೆ, ನನ್ನ ಕೆಲಸ ನೀವು ಮಾಡಿ ಎಂದು ಜೋರಲ್ಲಿ ಹೇಳಿದರು. ಆ ಕ್ಲರ್ಕ್ ನ ಮಾತನ್ನು ಕೇಳಿ ಅಜ್ಜಿ ಹಾಗೇ ಆ ಬೆಂಚ್ ನ ಮೇಲೆ ಕುಳಿತರು.

ಅಜ್ಜಿಯನ್ನು ನೋಡಿ ಉಳಿದ ಪೆನ್ಶನ್ ಹಣಕ್ಕೆಂದು ಬಂದಿದ್ದ ಅಜ್ಜಿಯಂದಿರು ಅವರ ಮುಖವನ್ನೇ ನೋಡಿದರು. ಇದೆಲ್ಲ ನೋಡಿ ನನಗೆ ಆ ಕ್ಲರ್ಕ್ ನ ಮೇಲೆ ತುಂಬಾ ಸಿಟ್ಟು ಬಂತು. ಆಗಲೇ ಆ ಅಜ್ಜಿಗೆ ಸ್ಲಿಪ್ ಫಿಲ್ ಮಾಡಿ ಅವರ ಹೆಬ್ಬೆಟ್ಟನ್ನು ಹಾಕಿಸಿ ಆ ಕ್ಲರ್ಕ್ ಹತ್ತಿರ ಕೊಟ್ಟೆ.

ಪೋಸ್ಟ್ ಆಫೀಸ್ ಇಂದ ಹೊರಗಡೆ ಬಂದಾಗ ಏನೋ ಹೆಚ್ಚು ಕಲಿತು, ಹೆಚ್ಚೆಚ್ಚು ಅಂಕ ಗಳಿಸಿ, ಸರಕಾರಿ ನೌಕರರ ಮೇಲೆ ಏನೋ ಜಿಗುಪ್ಸೆ ಹುಟ್ಟಿತು.

ವಯಸ್ಸಾದವರಿಗೆ, ಸರಕಾರಿ ಕೆಲಸದಲ್ಲಿರುವ ವ್ಯಕ್ತಿ ಕೊಡುವ ಗೌರವ ಇದುವೇ? ಆದರೂ ಮಾನವೀಯತೆ ದೃಷ್ಟಿಯಲ್ಲಿ ಆದರೂ ಒಂದು ಸಹಾಯ ಮಾಡಬಾರದೇ???ಎಂಬುದಾಗಿ ಪದೇ ಪದೇ ಕಾಡಿತು ಮಾತ್ರವಲ್ಲದೆ ಈ ಘಟನೆ ಆದ ಮೇಲೆ ಒಂದು ವಿಷಯ ಮನದಟ್ಟಾಯಿತು., ನಾವು ಎಷ್ಟು ಕಲಿತಿದ್ದೇವೆ, ಎಷ್ಟು ಡಿಗ್ರಿ ಮಾಡಿದ್ದೇವೆ ಎಂಬುದು ಮುಖ್ಯ ಅಲ್ಲ. ಈ ಸಮಾಜದಲ್ಲಿ ಜೀವಿಸುವಾಗ- ಎಲ್ಲರೊಂದಿಗೆ ಬೆರೆತು, ಒಳ್ಳೆ ರೀತಿಯಲ್ಲಿ ಮಾತಾಡಿ, ಹಿರಿಯರಿಗೆ ಗೌರವ ಕೊಡುವುದರಲ್ಲಿ ನಿಜವಾದ ಶಿಕ್ಷಣದ ಗುಟ್ಟು ಅಡಗಿದೆ ಎಂದು.

ಇದು ಒಂದು ಅಲ್ಲ, ಇಂತಹ ಅದೆಷ್ಟೋ ಘಟನೆಗಳು ನಮ್ಮ ಕಣ್ಣ ಮುಂದೆಯೇ ನಡೆದು ಹೋಗುತ್ತಿದೆ. ಉದಾ: ಬಸ್ಸಿನಲ್ಲಿ ವಯಸ್ಸಾದವರು ಬಂದಾಗ ಶಾಲಾ ಕಾಲೇಜು ವಿದ್ಯಾರ್ಥಿಗಳು ಸೀಟು ಬಿಟ್ಟು ಕೊಡದ ಇರುವುದು, ವಯಸ್ಸಾದ ತಂದೆ-ತಾಯಿಯನ್ನು ಸಾಕುವ ತಾಕತ್ತು ಇದ್ದರೂ ಅನಾಥ ಆಶ್ರಮ/ ವೃದ್ಧ ಆಶ್ರಮ ಸೇ-ರಿಸುವುದು. ಹೇಗೆ ಪದಾಥ-ರ್ದಲ್ಲಿ ಉಪ್ಪು ಇಲ್ಲದಿದ್ದರೆ ರುಚಿ ಇಲ್ಲವೋ, ಹಾಗೆ ಶಿಕ್ಷಣದಲ್ಲಿ ನೀತಿ, ಮೌಲ್ಯ ಇಲ್ಲದಿದ್ದರೆ ಶಿಕ್ಷಣ ಪಡೆದವರ ಪರಿಸ್ಥಿತಿ ಶಿಕ್ಷಣ ಪಡೆಯದ ಹಾಗೆ. ಇದಲ್ಲದೆಯೂ ಕೂಡ ,ಈ ತರಹದ ಅನೇಕ ಘಟನೆಗಳು ದೇಶದ ನಾನ ಕಡೆ ಪ್ರತೀ ದಿನವೂ ನಡೆಯುತ್ತಲೇ ಇರುತ್ತದೆ. ಅನೇಕರು ಸರಕಾರಿ ಸಂಸ್ಥೆಗಳಿಗೆ ಹೋಗಬೇಕಾದ ಸಂದರ್ಭ ಬಂದಾಗ ಬಹಳ ನೋವಿನಿಂದ, ಭಯದಿಂದ, ಸಾಗುವ ಸನ್ನಿವೇಶಗಳೆ ಹೆಚ್ಚು.

ಸರಕಾರಿ ಕೆಲಸಗಳು ಈಗಿನ ದಿನಗಳಲ್ಲಿ ಲಭಿಸಲು ಪುಣ್ಯ ಮಾಡಿರಬೇಕು. ಹಾಗಾಗಿಯೂ ಕೂಡ ಅದರ ಮಹತ್ವವನ್ನು ಅರಿಯದೆ, ಅಧಿಕಾರ ಸಿಕ್ಕಿದೆ ಎಂದು ದರ್ಪ ತೋರಿಸುವುದು ಅಲ್ಲ. ನೈಜ ಸರಕಾರಿ ಕಾರ್ಯಕರ್ತನು ಸೇವೆ ಮಾಡುವುದಕ್ಕಾಗಿ ಈ ಕೆಲಸ ಎಂದು ಭಾವಿಸಿದಾಗ ಇಂತಹ ಪರಿಸ್ಥಿತಿಗಳು, ಬಂದೊಂದಗುವುದಿಲ್ಲ. ಸರಕಾರಿ ಕೆಲಸ, ಅಥವಾ ಖಾಸಗಿ ಕೆಲಸಗಾರರು ತಿಳಿಯದವರಿಗೆ ಮನಃಪೂರ್ವಕವಾಗಿ ಸಹಾಯ ಮಾಡುವಂತಾಗಬೇಕು,ಆಗ ಜನಸಾಮನ್ಯರು ಕೊಡುವ ಗೌರವ ಇಮ್ಮಡಿಗೊಳ್ಳುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.




ಸಿನಿ ವಿಮರ್ಶೆ

# ದಿ ಗ್ರೇಟ್ ಇಂಡಿಯನ್ ಕಿಚೆನ್

–ಶೋಭಿತಾ ಎನ್




ದಿ ಗ್ರೇಟ್ ಇಂಡಿಯನ್ ಕಿಚೆನ್' ಸಾಮಾನ್ಯವಾಗಿ ಭಾರತೀಯ ಮನೆಗಳಲ್ಲಿನ ಅಡುಗೆಕೋಣೆಯಲ್ಲಿ ಪ್ರತಿದಿನ ಕಾಣಸಿಗುವ ಸಾಮಾನ್ಯ ಸಂಗತಿ ಸೆರೆಹಿಡಿದ ಈ ಮಲಯಾಳಂ ಸಿನಿಮಾ ಬದುಕಿನತ್ತ ನೇರವಾಗಿ ಹಿಡಿದ ಕೈಕನ್ನಡಿಯಾಗಿದೆ. ಜೋ ಬೇಬಿ ನಿರ್ದೇಶನ ಅಡಿಯಲ್ಲಿ ಬಿಡುಗಡೆಗೊಂಡಿರುವ ಎಲ್ಲಾ ಸಿನಿಮಾಗಳ ವಸ್ತುನಿಷ್ಠ ಸ್ತ್ರೀ ಸ್ವಾತ್ರಂತ್ಯ. ಕಳೆದ ತಿಂಗಳಷ್ಟೇ ಓಟಿಟಿ ಪ್ಲಾಟ್ ಫಾರ್ಮ್ ಅಲ್ಲಿ ತೆರೆಕಂಡ ಈ ಸಿನಿಮಾವು ಸ್ತ್ರೀ ಪಡು, ಆಕೆಯ ಸ್ಥಾನಮಾನ ಬಗ್ಗೆ ಚರ್ಚಿಸುವ ವೇದಿಕೆಯಾಗಿದೆ. "ಹೊಟ್ಟೆ, ಗಂಡಿನ ಹೃದಯ ದಾರಿ" ಎಂಬ ಗಾದೆಗೆ ಅನುಗುಣವಾಗಿ ಹೊಟ್ಟೆ ತಣ್ಣಗೆ ಮಾಡಲು ಅಡುಗೆಕೋಣೆಯಲ್ಲಿ ಮನೆ ಒಡತಿ ಪಡುವ ಶ್ರಮವ ದೃಶ್ಯವನ್ನು ನಿರ್ದೇಶಕ ಇಂಚಿಂಚಾಗಿ ಪ್ರೇಕ್ಷಕರ ಮುಂದಿಟ್ಟಿದ್ದಾರೆ. ಸಾಮಾನ್ಯ ಕುಟುಂಬದ ಯುವತಿಯೊಬ್ಬಳು ನಾಯರ್ ಕುಟುಂಬಕ್ಕೆ ಸೊಸೆಯಾಗಿ ಕಾಲಿಡುವ ಮೂಲಕ ಸಿನಿಮಾ ಶುರುವಾಗುತ್ತದೆ.

ಆ ಮನೆಯಲ್ಲಿ ಅಡುಗೆ ಮಾಡುವುದು, ಕಸ ಗುಡಿಸುವುದು, ಬಟ್ಟೆ ಒಗೆಯುವುದು ಹೀಗೆ ನೂರೆಂಟು ಮನೆ ಕೆಲಸಗಳನ್ನು ನಗು-ನಗುತ್ತಲೇ ಎಲ್ಲ ಕೆಲಸಗಳನ್ನೂ ನಿರ್ವಹಿಸುತ್ತಿರುವ ಯುವತಿ ವೃತ್ತಿಯಲ್ಲಿ ಅಧ್ಯಾಪಕನ ಪಾತ್ರದಲ್ಲಿ ಕಾಣಿಸಿಕೊಳ್ಳುವ ಗಂಡ ಹೆಂಡತಿಯ ಮೇಲೆ ಅಧಿಕಾರವನ್ನು ಸ್ಥಾಪಿಸಲು ಆಕೆಯನ್ನು ಮಾನಸಿಕವಾಗಿ, ಶಾರೀಕವಾಗಿ ಬಲಹೀನಳನ್ನಾಗಿ ಮಾಡುತ್ತಾ ಹೊಂದತೆಲ್ಲ ಆಕೆಗೆ ತಾನಿಲ್ಲಿ ಗುಲಾವಳು ಎಂಬುದು ಅರಿವಾಗುತ್ತಾ ಹೋಗುತ್ತದೆ. ಕೊನೆಗೊಂದು ದಿನ ಆಕೆ ಧಿಕ್ಕರಿಸಿ ಮನೆಯಿಂದ ಹೊರನಡೆಯುತ್ತಾಳೆ. "ತೊಂಡಿ ಮುತಲ್ ದೃಕ್ ಸಾಕ್ಷಿವರೆ' ಸಿನೆಮಾದಲ್ಲಿ ಬಣ್ಣಹಚ್ಚಿರುವ ನಾಯಕ ಸೂರಜ್ ವೆಂಜರಮೂಡು, ನಾಯಕಿ ಪಾತ್ರಧಾರಿ ನಿಮಿಷ ಸಜಯನ್ ಇಬ್ಬರ ಜೋಡಿ ಈ ಸಿನಿಮಾದಲ್ಲೂ ಮೋಡಿ ಮಾಡಿದೆ. ಸಂಪೂರ್ಣ ಚಿತ್ರ ಯಾವುದೋ ಮನೆಯಲ್ಲಿ ಕ್ಯಾಮೆರಾ ಇಟ್ಟು ತೆಗೆದಿರುವಂತೆ ಅತ್ಯಂತ ಸಹಜವಾಗಿದ್ದು ಕ್ಯಾಮೆರಾ ಕೋನದ ಕೆಲವೊಂದು ದೃಶ್ಯ ಸಾಮಾನ್ಯ ದೃಶ್ಯಕ್ಕೂ ವಿಶೇಷ ಅರ್ಥ ಕಲ್ಪಿಸಿದೆ. ಸಿನಿಮಾ ಮತ್ತೊಂದು ಕೇಂದ್ರ ಬಿಂದು ಚಿತ್ರದ ಸಂಗೀತ. ಪಾಳುವ ಭಾಷೆಯಲ್ಲಿ ರಚಿಸಿದ ಒಂದು ಹಾಡು ಮನೆ ಒಡತಿಯ ಶ್ರಮ, ನೋವು, ತಾಳ್ಮೆಯ ಮಟ್ಟವನ್ನು ವಿವರಿಸುತ್ತದೆ. ಅಡುಗೆಮನೆಯಲ್ಲಿ ಸಹಜವಾಗಿ ಆಹಾರ ಸೀದು ಹೋಗುವ, ತರಕಾರಿಗಳನು ತುಂಡರಿಸುವ, ಬಾಣಲೆಯ ಎಣ್ಣೆ, ಕಾಯಿ ತುರಿವಾಗ ಉಂಟಾಗುವ ಶಬ್ದ ನೀರಿನ ಶಬ್ದ ಹೀಗೆ ಅದೆಷ್ಟೋ ಹಿನ್ನಲೆ ಶಬ್ದಗಳನ್ನು ಸಿನಿಮಾ ನೋಡುವಾಗ ಹೊಸ ಅರ್ಥ ಅನುಭವವಾಗುತ್ತದೆ. ಶಬರಿಮಲೆಗೆ ಸ್ತ್ರೀ ಪ್ರವೇಶದ ವಿಷಯದ ಕುರಿತು ಸಿನಿಮಾದಲ್ಲಿ ಚರ್ಚಿಸಿದೆ. ಅಡುಗೆ ಕೆಲಸಕ್ಕೆ ಸಂಬಳ ಕೊಡಬೇಕಿದೆಯೇ ಎಂಬ ಚರ್ಚೆ ನಡೆಯುವ ಈ ಕಾಲಘಟ್ಟದಲ್ಲಿ ಒಂದೊಳ್ಳೆ ಉತ್ತರಕ್ಕಾಗಿ 'ದಿ ಗ್ರೇಟ್ ಇಂಡಿಯನ್ ಕಿಚೆನ್' ಸಿನೆಮಾವನ್ನು ನೋಡಬಹುದು.

# ಮನಕೆ ಮುದ ನೀಡುವ ಸ್ವರ್ಣ ಮಂಜರಿ

–ಅಕ್ಷಯ್ ಕುಮಾರ್ ಎ

ಮರವೆಲ್ಲ ಹಳದಿ,ಮರಕ್ಕೆ ಹೂವೇ ಶೃಂಗಾರ ,ಮರದ ಕೆಳಗೆ ಹೂವಿನ ಹಾಸಿಗೆ ರೀತಿಯಲ್ಲಿ ಹೂಗಳು ಬಿದ್ದಿರುವ ಪರಿ, ಒಮ್ಮೆ ಆ ಮರದಲ್ಲಾದ ಹೂವನ್ನು ಕಂಡರೆ ಮನಸೋಲದ ವ್ಯಕ್ತಿ ಇರಲಾರ ಎಂಬ ಮಟ್ಟಿಗೆ ಬೆಳೆಯುವ ಹೂ, ಅಷ್ಟಕ್ಕೂ ಯಾವ ಮರ? ಯಾವ ಹೂ? ಅಂದುಕೊಂಡಿರಾ.. ಹೆಸರು ಕೊಪ್ಪರ್ಪೊಡ್. ಹಳದಿ ಪ್ಲೇಮೆಟ್ರಿ, ಪೆಲ್ಟೋಫೋರಮ್ ಸ್ಟೆರೊಕಾರ್ಪಮ್, ಹೀಗೆ ನಾನಾ ಹೆಸರುಗಳಿಂದ ಕರೆಯುವ ಈ ಮರದ ರೆಂಬೆ, ಕೊಂಬೆಯೂ ಅಂದವೆ. ಉಷ್ಣವಲಯದ ಆಗ್ನೇಯ ಏಷ್ಯಾದ ಮರ ಇದಾಗಿದ್ದು, ಪ್ರಪಂಚದಾದ್ಯಂತ ಅಲಂಕಾರಿಕ ಮರವಾಗಿ ಉಪಯೋಗಿಸಲಾಗುತ್ತದೆ.

**ಕೊಪ್ಪರ್ಪೊಡ್ ನ ಗುಣಲಕ್ಷಣ:**

ಇದು 15-25ಮೀ ಎತ್ತರಕ್ಕೆ ಬೆಳೆಯುವ ಪತನಶೀಲ ಪ್ರಭೇದ, ಅಪರೂಪಕ್ಕೆ 50 ಮೀ ವರೆಗೂ ಬೆಳೆಯುತ್ತದೆ. ಇದರ ಹೂ, ಹಣ್ಣುಗಳು ಪಕ್ಷಿಗಳಿಗೆ ಇಷ್ಟವಾದ ಖಾದ್ಯ. ಗಿಡ ಮೊಲಕೆಯೊಡೆದಾಗ ಕಂದು ಬಣ್ಣದಲ್ಲಿ ಮೂಡಿಬರುತ್ತವೆ. ಬೆಳೆಯುತ್ತ ಹೋದಂತೆಲ್ಲ ಬಣ್ಣ ಬದಲಾಗುತ್ತ ಬರುತ್ತವೆ. ಡಿಸೆಂಬರ್ ನಿಂದ ಮಾರ್ಚ್ ವರೆಗೆ ಕೊಪ್ಪರ್ಪೊಡ್ ಹೂ ಅಲ್ಲಲ್ಲಿ ಕಾಣಸಿಗುತ್ತವೆ. ಈ ಮರವು ಕಡಿಮೆ ನೀರಿದ್ದರು ಬೆಳೆಯುವ ಸಮರ್ಥವನ್ನು ಹೊಂದಿದೆ.

ಪ್ರಾರಂಭದ ಹಂತ ಹೂ ಬಿಡುವುದು ಅನಂತರ ಕೋಡು ಹುಟ್ಟಿ ಬಳಿಕ ಬೀಜ ಒಡೆದು ಸುತ್ತೆಲ್ಲ ಹರಡುವ ಕಾರಣ ಅನೇಕ ಗಿಡಗಳು ಚಿಗುರೊಡೆದು ಹೀಗೆ ಗಿಡಗಳ ತನ್ನ ಸಾಮ್ರಜ್ಯವನ್ನು ವಿಸ್ತರಿಸುತ್ತ ಹೋಗುತ್ತದೆ. ಡಿಸೆಂಬರ್ ನಲ್ಲಿ ಹೂ ಬಿಡಲು ಶುರುವಾದರೆ ಹಂತ ಹಂತವಾಗಿ ಇಡೀ ಮರವನ್ನೆ ಆಕ್ರಮಿಸಿಕೊಂಡು ಬಿಡುತ್ತವೆ. ಜನವರಿ ಕೊನೆಗೆ ಮರವು ಪೂರ್ತಿ ಹೂಗಳಿಂದ ತನ್ನನ್ನು ತಾನು ಅಲಂಕರಿಸಿಕೊಳ್ಳುತ್ತವೆ. ಮರದ ಕೆಳಗಡೆ ಹಳದಿ ಬಣ್ಣದ ಕಾರ್ಪೆಟ್ ಹಾಕಿದ ರೀತಿಯಲ್ಲಿ ದಾ-ರಿಹೋಕರಿಗೆ, ಪರಿಸರ ಪ್ರೀಯರಿಗೆ ಈ ಹೂವಿನ ಆಕರ್ಷಣೆಯನ್ನು ಆಹ್ಲಾದಿಸುವುದು ಒಂದು ವಿಶೇಷ ಅನುಭವವೆ ಸರಿ.

**ವಿಶೇಷತೆಗಳು:**

ಇಂಡೋನೇಷ್ಯಾದಲ್ಲಿ ಬಾಟಿಕ್ ಬಟ್ಟೆಯ ಬಣ್ಣ ಕಂದು ಬರಲು ಉಪಯೋಗಿಸುತ್ತಾರೆ. ತೆಲಂಗಾಣ ರಾಜ್ಯದಲ್ಲಿ ವರ್ಷಕೊಮ್ಮೆ ನಡೆಯುವ ಬಟುಕಮ್ಮ" ಉತ್ಸವದ ಆರ್ಕಷಣೆಯ ಕೇಂದ್ರಬಿಂದು ಈ ಹೂ. ಕೊಪ್ಪರ್ಪೊಡ್ ಆಗ್ನೇಯ ಏಷ್ಯಾ ಮತ್ತು ಉತ್ತರ ಆಸ್ಟ್ರೇಲಿಯದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಉಳಿದಂತೆ ಶ್ರೀಲಂಕಾ, ಇಂಡೋನೇಷ್ಯ, ಮಲೇಷ್ಯಾ,



ಪಿಲಿಫೈನ್, ಥೈಲಾಂಡ್, ವಿಯೇಟ್ನಾಂ, ಭಾರತದಲ್ಲಿ ಬೆಳೆಯುವ ಮರ ಇದಾಗಿದ್ದು, ಬೆಳೆಯಲು ಮುಖ್ಯ ಉದ್ದೇಶ ವಾಸವಿರು ಸುತ್ತುಮುತ್ತಲಿನ ಪರಿಸರವನ್ನು ಅಂದಗೊಳಿಸಲು. ವಿದ್ಯಾಸಂಸ್ಥೆ, ಕಟ್ಟಡ, ಪಾರಂಪ-ರಿಕ ಸ್ಥಳಗಳಲ್ಲಿ ಈ ಮರ ಕಾಣಸಿಗುವುದು ಸರ್ವೇಸಾಮಾನ್ಯ.

ಮುಖ್ಯ ಸಂಪಾದಕರು
ಎಂ.ಪಿ. ಉಮೇಶ್ ಚಂದ್ರ
ಅಧ್ಯಕ್ಷರು, ಎಮ್.ಸಿ.ಜೆ ವಿಭಾಗ

ಮಾರ್ಗದರ್ಶಕ ಉಪನ್ಯಾಸಕರು
ಅನುಷಾ ಎ
ನಿತೀಶ್ ಪಿ

ವಿದ್ಯಾರ್ಥಿ ಸಂಪಾದಕರು
ಅಕ್ಷಯ್ ಕುಮಾರ್ ಎ
ರಾಜೇಶ್ ಜಿ
ಅಭಿಲಾಷ ಎಸ್
ಅನಿತ್ ಬಿ
ಗಣೇಶ್ ಪಿ ಎಮ್